KACD420014162020

**ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ, ಹೊಳಲ್ಕೆರೆ.**

**ಉಪಸ್ಥಿತರು**

ಶ್ರೀ ರಘುರಾಮ ಎನ್.ಎಸ್., ಬಿ.ಎ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.
ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

**ದಿನಾಂಕ 22 ನೇ ಏಪ್ರಿಲ್, 2026**

**ಸಿ.ಸಿ. ಸಂಖ್ಯೆ- 1003/2020**

ಫಿರ್ಯಾದಿ : ರಾಜ್ಯದ ಪರವಾಗಿ, ಹೊಳಲ್ಕೆರೆ ಪೊಲೀಸ್ ಠಾಣೆ.

(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ಧ-**

ಆರೋಪಿತರುಃ 1) ಪ್ರದೀಪ ಕುಮಾರ್ ಜಾದವ್
ಬಿನ್ ಮೂರ್ತಿರಾವ್ ಜಾದವ್,
ವಯಸ್ಸುಃ ಸುಮಾರು 31 ವರ್ಷ,
ಉದ್ಯೋಗಃ ಕೆ.ಎ.02-ಎನ್.2099 ನೇ
ಓಮಿನಿ ವ್ಯಾನ್ ಚಾಲಕ,
ವಾಸಃ ನಂ.34/2, ಬಿ.ಬಿ. ರಸ್ತೆ, ಶಿವಮೊಗ್ಗ.
(ಮೃತಪಟ್ಟಿರುತ್ತಾರೆ)

2) ನವೀನ ಯಾನೆ ಪಾಂಡುರಂಗ ಬಿನ್ ನಾಗಪ್ಪ,
ಉದ್ಯೋಗಃ ಕೆ.ಎ.16-ಎ.9243 ನೇ ಲಾರಿ ಚಾಲಕ,
ವಾಸಃ ಸೋನಲೆ ಗ್ರಾಮ, ಹೊಸನಗರ ತಾಲ್ಲೂಕು.

(2 ನೇ ಆರೋಪಿತರ ಪರ ಪ್ರತಿನಿಧಿಸುವವರುಃ ಶ್ರೀ ಡಿ. ಜಯಣ್ಣ, ನ್ಯಾಯವಾದಿಗಳು)

| | | |
|---|---|---|
| 1 | ಅಪರಾಧ ನಡೆದ ದಿನಾಂಕ | 23.12.2010 |
| 2 | ಅಪರಾಧ ವರದಿಯಾದ ದಿನಾಂಕ | 23.12.2010 |
| 3 | ಆರೋಪಿತರನ್ನು ಬಂಧಿಸಿದ ದಿನಾಂಕ | -- |
| 4 | ಫಿರ್ಯಾದಿಯ ಹೆಸರು | ಆರ್. ಜಗದೀಶ |
| 5 | ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 11.07.2019 |
| 6 | ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 05.03.2026 |
| 7 | ಆರೋಪಿಸಲಾದ ಅಪರಾಧಗಳು | ಭಾರತೀಯ ದಂಡ ಸಂಹಿತೆ ಕಲಂ 279, 337, 338, 304(ಎ) |
| 8 | ನ್ಯಾಯಾಧೀಶರ ಅಭಿಪ್ರಾಯ | 2 ನೇ ಆರೋಪಿತರು ನಿರಪರಾಧಿ |

*****

**ತೀರ್ಪು**

ಮೃತ 1 ನೇ ಆರೋಪಿ ಮತ್ತು 2 ನೇ ಆರೋಪಿತರ ವಿರುದ್ಧ ಪೊಲೀಸ್ ವೃತ್ತ ನಿರೀಕ್ಷಕರು, ಹೊಳಲ್ಕೆರೆ ವೃತ್ತ, ಹೊಳಲ್ಕೆರೆರವರು ದೋಷಾರೋಪಣೆ ಪತ್ರವನ್ನು ಸಲ್ಲಿಸಿ, ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 279, 337, 338, 304(ಎ) ರ ಅಪರಾಧಗಳ ಅಡಿಯಲ್ಲಿ ಕೃತ್ಯವೆಸಗಿದ್ದಾರೆಂದು ಆರೋಪಿಸಿರುತ್ತಾರೆ.

2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆಃ-

ದಿನಾಂಕ 23.12.2010 ರಂದು ರಾತ್ರಿ 3.30 ಗಂಟೆ ಸಮಯದಲ್ಲಿ, 1 ನೇ ಆರೋಪಿತನು ತನ್ನ ಬಾಬ್ತು ಕೆ.ಎ.02-ಎನ್.2099 ನೇ ನಂಬರಿನ ಓಮಿನಿ ವಾಹನವನ್ನು ಹೊಳಲ್ಕೆರೆ ಕಡೆಯಿಂದ ಚಿತ್ರದುರ್ಗ ಕಡೆಗೆ ಚಾಲಾಯಿಸಿಕೊಂಡು

ಹೋಗುತ್ತಿದ್ದಾಗ, ಚಿತ್ರಹಳ್ಳಿ-ಶಿವಗಂಗ ಗ್ರಾಮಗಳ ಮಧ್ಯೆ ಎನ್.ಹೆಚ್.13 ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಕೆ.ಎ.16-ಎ.9243 ನೇ ನಂಬರಿನ ಲಾರಿಯನ್ನು 2 ನೇ ಆರೋಪಿತರು ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದರ ಪರಿಣಾಮ, ಹಿಂದಿನಿಂದ ಬರುತ್ತಿದ್ದ 1 ನೇ ಆರೋಪಿತರು ತನ್ನ ಓಮಿನಿ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿ, ಲಾರಿಯ ಹಿಂಭಾಗಕ್ಕೆ ಡಿಕ್ಕಿಹೊಡೆಸಿದ್ದ ರಿಂದ, ಸದರಿ ಓಮಿನಿ ವಾಹನದ ಮುಂಭಾಗ ಲಾರಿಯ ಕೆಳಗಡೆ ಸಿಕ್ಕಿಹಾಕಿಕೊಂಡು ನಜ್ಜುಗುಜ್ಜಾಗಿ, ಓಮಿನಿ ವಾಹನದ ಚಾಲಕನು ಸೇರಿದಂತೆ ಪ್ರಯಾಣಿಸುತ್ತಿದ್ದ ನಾಗರಾಜ, ಅತೀಕ್ ಉರ್ ರೇಹಮಾನ್, ಯೋಗೇಶ ಎಂಬ ನಾಲ್ಕು ಜನರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಹಾಗೂ ಚಾಸಾ-24 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದು ಆರೋಪಣೆಯನ್ನು ಮಾಡಿರುತ್ತಾರೆ.

3. ಮೃತ 1 ನೇ ಆರೋಪಿ ಮತ್ತು 2 ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ, 2 ನೇ ಆರೋಪಿತರ ವಿರುದ್ದ ಆರೋಪಣಾ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಯಿತು. 2 ನೇ ಆರೋಪಿತರು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, 2 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ 2 ನೇ ಆರೋಪಿತರ ವಿರುದ್ಧ ಆಪಾದನೆಯನ್ನು ರಚಿಸಿ, ಅವರಿಗೆ ಓದಿ ಹೇಳಿ ವಿವರಿಸಲಾಗಿ, 2 ನೇ ಆರೋಪಿತರು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. 2 ನೇ ಆರೋಪಿತರ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ, ಒಟ್ಟು 38 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಗಾಯಾಳು ಸಾಕ್ಷಿದಾರರಾದ ಚಾಸಾ-24 ರವರನ್ನು ಪ್ರಾಸಾ-2 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-25 ಮತ್ತು 26 ರವರನ್ನು ಪ್ರಾಸಾ-3 ಮತ್ತು 4 ಎಂದು, ಪಂಚನಾಮೆ ಸಾಕ್ಷಿದಾರರಾದ ಚಾಸಾ-22 ರವರನ್ನು ಪ್ರಾಸಾ-6 ಎಂದು, ತನಿಖಾಧಿಕಾರಿಗಳಾದ ಚಾಸಾ-36 ಮತ್ತು 38 ರವರನ್ನು ಕ್ರಮವಾಗಿ ಪ್ರಾಸಾ-7

ಮತ್ತು 5 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2 ರಿಂದ 21, 27 ರಿಂದ 35, 37 ರವರನ್ನು ಅಭಿಯೋಜನೆಯವರು ಸಾಕ್ಷ್ಯ ಮಾಡಿಸದ ಕಾರಣ, ಸದರಿರವರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 19 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. ಚಾಸಾ-23 ರವರು ಮೃತಪಟ್ಟಿರುತ್ತಾರೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ 2 ನೇ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಅವರ ವಿರುದ್ಧ ಅಭಿಯೋಜನೆಯ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿತರು ಅಭಿಯೋಜನೆಯ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿದಾಗ್ಯೂ, ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ.

6. 2 ನೇ ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ವಿಚಾರಣೆ ಮಾಡಿದ ನಂತರ, ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

7. ಉಭಯ ಪಕ್ಷಗಳ ವಾದ-ವಿವಾದಗಳನ್ನು ಆಲಿಸಲಾಯಿತು. ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

8. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಶೀಲನೆಗೆ ಉದ್ಭವಿಸಿರುತ್ತವೇ:-

1. ದಿನಾಂಕ 23.12.2010 ರಂದು ರಾತ್ರಿ 3.30 ಗಂಟೆ ಸಮಯದಲ್ಲಿ, ಮೃತ 1 ನೇ ಆರೋಪಿತನು ತನ್ನ ಬಾಬ್ತು ಕೆ.ಎ.02-ಎನ್.2099 ನೇ ನಂಬರಿನ ಓಮಿನಿ ವಾಹನವನ್ನು ಹೊಳಲ್ಕೆರೆ ಕಡೆಯಿಂದ ಚಿತ್ರದುರ್ಗ ಕಡೆಗೆ ಚಾಲಾಯಿಸಿಕೊಂಡು ಹೋಗುತ್ತಿದ್ದಾಗ, ಚಿತ್ರಹಳ್ಳಿ-ಶಿವಗಂಗ ಗ್ರಾಮಗಳ ಮಧ್ಯೆ ಎನ್.ಹೆಚ್.13 ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಕೆ.ಎ.16-ಎ.9243 ನೇ ನಂಬರಿನ ಲಾರಿಯನ್ನು 2 ನೇ ಆರೋಪಿತರು

ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದರ ಪರಿಣಾಮ, ಹಿಂದಿನಿಂದ ಬರುತ್ತಿದ್ದ ಮೃತ 1 ನೇ ಆರೋಪಿತರು ತನ್ನ ಓಮಿನಿ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿ, ಲಾರಿಯ ಹಿಂಭಾಗಕ್ಕೆ ಡಿಕ್ಕಿಹೊಡೆಸಿದ್ದರಿಂದ, ಸದರಿ ಓಮಿನಿ ವಾಹನದ ಮುಂಭಾಗ ಲಾರಿಯ ಕೆಳಗಡೆ ಸಿಕ್ಕಿಹಾಕಿಕೊಂಡು ನಜ್ಜುಗುಜ್ಜಾಗಿರುವ ಕಾರಣ, 2 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

2. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಮೃತ 1 ನೇ ಆರೋಪಿತರು ಓಮಿನಿ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದಿದ್ದರಿಂದ ಮತ್ತು 2 ನೇ ಆರೋಪಿತರು ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದರ ಪರಿಣಾಮ, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳಾಗಿರುವ ಕಾರಣ, 2 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 337 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ ?

3. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಮೃತ 1 ನೇ ಆರೋಪಿತರು ಓಮಿನಿ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದಿದ್ದರಿಂದ ಮತ್ತು 2 ನೇ ಆರೋಪಿತರು ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದರ ಪರಿಣಾಮ, ಚಾಸಾ-24 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುವ ಕಾರಣ, 2 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 338 ರ ಅಡಿಯಲ್ಲಿ ಶಿಕ್ಷಾರ್ಹ

ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

4. ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ, ಮೃತ 1 ನೇ ಆರೋಪಿತರು ಓಮಿನಿ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದಿದ್ದರಿಂದ ಮತ್ತು 2 ನೇ ಆರೋಪಿತರು ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದರ ಪರಿಣಾಮ, ಓಮಿನಿ ವಾಹನದ ಚಾಲಕನು ಸೇರಿದಂತೆ ಪ್ರಯಾಣಿಸುತ್ತಿದ್ದ ನಾಗರಾಜ, ಅತೀಕ್ ಉರ್ ರೇಹಮಾನ್, ಯೋಗೇಶ ಎಂಬ ನಾಲ್ಕು ಜನರು ಸ್ಥಳದಲ್ಲಿಯೇ ಮೃತಪಟ್ಟಿರುವ ಕಾರಣ, 2 ನೇ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತುಪಡಿಸಿದ್ದಾರೆಯೇ?

5. ಹಾಗಿದ್ದರೆ ಯಾವ ಆಜ್ಞೆ?

9. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡ ಕಾರಣಗಳಿಂದ ಈ ರೀತಿ ಇದೆಃ-

| | | |
|---|---|---|
| ಅಂಶ-1 | : | ನಕಾರಾತ್ಮಕವಾಗಿ, |
| ಅಂಶ-2 | : | ನಕಾರಾತ್ಮಕವಾಗಿ, |
| ಅಂಶ-3 | : | ನಕಾರಾತ್ಮಕವಾಗಿ, |
| ಅಂಶ-4 | : | ನಕಾರಾತ್ಮಕವಾಗಿ, |
| ಅಂಶ-5 | : | ಅಂತಿಮ ಆದೇಶದಂತೆ. |

## ಕಾ ರ ಣ ಗ ಳು

**10. ಅಂಶ - 1 ರಿಂದ 4:-** ಈ ನಾಲ್ಕು ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ವಿಷಯದ ಪುನರಾವರ್ತನೆ ಆಗುವುದನ್ನು ತಪ್ಪಿಸುವ ಸಲುವಾಗಿ ಈ ನಾಲ್ಕು ಅಂಶಗಳನ್ನು ಜೊತೆಗೂಡಿಸಿ ಒಟ್ಟಿಗೆ ಚರ್ಚಿಸಿರುತ್ತೇನೆ. ಈ ಮೇಲ್ಕಂಡ ಅಂಶಗಳ ಕುರಿತಾಗಿ, ಅಭಿಯೋಜನೆಯವರು ತಮ್ಮ ಪರವಾಗಿ

ದೋಷಾರೋಪಣಾ ಪತ್ರದಲ್ಲಿ, ಒಟ್ಟು 38 ಜನ ಸಾಕ್ಷಿದಾರರನ್ನು ನಮೂದಿಸಲಾಗಿದ್ದು, ಫಿರ್ಯಾದುದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು, ಗಾಯಾಳು ಸಾಕ್ಷಿದಾರ ರಾದ ಚಾಸಾ-24 ರವರನ್ನು ಪ್ರಾಸಾ-2 ಎಂದು, ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-25 ಮತ್ತು 26 ರವರನ್ನು ಪ್ರಾಸಾ-3 ಮತ್ತು 4 ಎಂದು, ಪಂಚನಾಮೆ ಸಾಕ್ಷಿದಾರರಾದ ಚಾಸಾ-22 ರವರನ್ನು ಪ್ರಾಸಾ-6 ಎಂದು, ತನಿಖಾಧಿಕಾರಿಗಳಾದ ಚಾಸಾ-36 ಮತ್ತು 38 ರವರನ್ನು ಕ್ರಮವಾಗಿ ಪ್ರಾಸಾ-7 ಮತ್ತು 5 ಎಂದು ಸಾಕ್ಷ್ಯ ಮಾಡಿಸಿರುತ್ತಾರೆ. ಚಾಸಾ-2 ರಿಂದ 21, 27 ರಿಂದ 35, 37 ರವರನ್ನು ಅಭಿಯೋಜನೆಯವರು ಸಾಕ್ಷ್ಯ ಮಾಡಿಸದ ಕಾರಣ, ಸದರಿರವರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ. ಈ ಮೇಲ್ಕಂಡ ಮೌಖಿಕ ಸಾಕ್ಷ್ಯಕ್ಕೆ ಪೂರಕವಾಗಿ ನಿಪಿ-1 ರಿಂದ 19 ರಂತೆ ದಾಖಲಾತಿಗಳನ್ನು ನಿಶಾನಿಸಿರುತ್ತಾರೆ. ಚಾಸಾ-23 ರವರು ಮೃತಪಟ್ಟಿರುತ್ತಾರೆ.

11. ಈ ಪ್ರಕರಣದಲ್ಲಿ ದಿನಾಂಕ 23.12.2010 ರಂದು ರಾತ್ರಿ 3.30 ಗಂಟೆ ಸಮಯದಲ್ಲಿ, 1 ನೇ ಆರೋಪಿತನು ತನ್ನ ಬಾಬ್ತು ಕೆ.ಎ.02-ಎನ್.2099 ನೇ ನಂಬರಿನ ಓಮಿನಿ ವಾಹನವನ್ನು ಹೊಳಲ್ಕೆರೆ ಕಡೆಯಿಂದ ಚಿತ್ರದುರ್ಗ ಕಡೆಗೆ ಚಾಲಾಯಿಸಿಕೊಂಡು ಹೋಗುತ್ತಿದ್ದಾಗ, ಚಿತ್ರಹಳ್ಳಿ-ಶಿವಗಂಗ ಗ್ರಾಮಗಳ ಮಧ್ಯೆ ಎನ್.ಹೆಚ್.13 ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಕೆ.ಎ.16-ಎ.9243 ನೇ ನಂಬರಿನ ಲಾರಿಯನ್ನು 2 ನೇ ಆರೋಪಿತರು ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯದಲ್ಲಿ ನಿಲ್ಲಿಸಿದ್ದರ ಪರಿಣಾಮ, ಹಿಂದಿನಿಂದ ಬರುತ್ತಿದ್ದ 1 ನೇ ಆರೋಪಿತರು ತನ್ನ ಓಮಿನಿ ವಾಹನವನ್ನು ನಿರ್ಲಕ್ಷತನದಿಂದ ಚಲಾಯಿಸಿ, ಲಾರಿಯ ಹಿಂಭಾಗಕ್ಕೆ ಡಿಕ್ಕಿಹೊಡೆಸಿದ್ದ ರಿಂದ, ಸದರಿ ಓಮಿನಿ ವಾಹನದ ಮುಂಭಾಗ ಲಾರಿಯ ಕೆಳಗಡೆ ಸಿಕ್ಕಿಹಾಕಿಕೊಂಡು ನಜ್ಜುಗುಜ್ಜಾಗಿ, ಓಮಿನಿ ವಾಹನದ ಚಾಲಕನು ಸೇರಿದಂತೆ ಪ್ರಯಾಣಿಸುತ್ತಿದ್ದ ನಾಗರಾಜ, ಅತೀಕ್ ಉರ್ ರೇಹಮಾನ್, ಯೋಗೇಶ ಎಂಬ ನಾಲ್ಕು ಜನರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಹಾಗೂ ಚಾಸಾ-24 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ ಎಂದು ಆರೋಪಣೆ ಯನ್ನು ಮಾಡಿರುತ್ತಾರೆ. ಆದ್ದರಿಂದ 2 ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 337, 338, 304(ಎ) ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

12. ಈ ಪ್ರಕರಣದಲ್ಲಿ ಅಭಿಯೋಜನೆಯು 2ನೇ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 337, 338, 304(ಎ) ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಈ ಕುರಿತಾಗಿ ಭಾರತೀಯ ದಂಡ ಸಂಹಿತೆಯ ಮೇಲ್ಕಂಡ ಅಪರಾಧಿಕ ಕೃತ್ಯದ ಘಟಕಾಂಶಗಳನ್ನು ಪರಿಶೀಲಿಸಲು ಸದರಿ ಕಲಂಗಳನ್ನು ಕೂಲಂಕುಷವಾಗಿ ಈ ಕೆಳಕಂಡಂತೆ ಪರಿಶೀಲಿಸಲಾಗಿರುತ್ತದೆಃ-

ಭಾರತೀಯ ದಂಡ ಸಂಹಿತೆ ಕಲಂ 279: ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ವಾಹನ ನಡೆಸುವುದು ಅಥವಾ ಸವಾರಿ ಮಾಡುವುದುಃ- ಮನುಷ್ಯನ ಪ್ರಾಣಕ್ಕೆ ಅಪಾಯವುಂಟಾಗುವಂತೆ ಅಥವಾ ಯಾವನೇ ಇತರ ವ್ಯಕ್ತಿಗೆ ಗಾಯ ಅಥವಾ ಕ್ಷತಿಯುಂಟು ಮಾಡುವ ಹಾಗೆ ಸಾರ್ವಜನಿಕ ರಸ್ತೆಯಲ್ಲಿ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವನೇ ವ್ಯಕ್ತಿಯು ವಾಹನ ನಡೆಸಿದರೆ ಅಥವಾ ಸವಾರಿ ಮಾಡಿದರೆ ಅವನು 6 ತಿಂಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ 1,000/- ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಭಾರತೀಯ ದಂಡ ಸಂಹಿತೆ ಕಲಂ 337: ಇತರ ಪ್ರಾಣಕ್ಕೆ ಅಥವಾ ದೈಹಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಕೃತ್ಯದಿಂದ ಗಾಯ ವನ್ನುಂಟು ಮಾಡುವುದು:- ಯಾವನೇ ವ್ಯಕ್ತಿಯು ಮನುಷ್ಯನ ಪ್ರಾಣವನ್ನು ಅಥವಾ ಇತರರ ದೈಹಿಕ ಸುರಕ್ಷತೆಯನ್ನು ಅಪಾಯಕ್ಕೀಡು ಮಾಡುವಂತೆ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವುದೇ ಕೃತ್ಯವನ್ನು ಮಾಡಿ ಯಾವನೇ ವ್ಯಕ್ತಿಗೆ ಗಾಯವನ್ನುಂಟು ಮಾಡಿದರೆ, ಅಥವಾ 6 ತಿಂಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ 500/- ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಭಾರತೀಯ ದಂಡ ಸಂಹಿತೆ ಕಲಂ 338: ಇತರರ ಪ್ರಾಣಕ್ಕೆ ಅಥವಾ ದೈಹಿಕ ಸುರಕ್ಷತೆಗೆ ಅಪಾಯವನ್ನುಂಟು ಮಾಡುವ ಕೃತ್ಯದಿಂದ ತೀವ್ರ ಗಾಯವನ್ನುಂಟು ಮಾಡುವುದು:- ಯಾವನೇ ವ್ಯಕ್ತಿಯು ಮನುಷ್ಯನ

ಪ್ರಾಣವನ್ನು ಅಥವಾ ಇತರರ ದೈಹಿಕ ಸುರಕ್ಷತೆಯನ್ನು ಅಪಾಯಕ್ಕೀಡು ಮಾಡುವಂತೆ ದುಡುಕಿನಿಂದ ಅಥವಾ ನಿರ್ಲಕ್ಷ್ಯದಿಂದ ಯಾವುದೇ ಕೃತ್ಯವನ್ನು ಮಾಡಿ ಯಾವನೇ ವ್ಯಕ್ತಿಗೆ ತೀವ್ರ ಗಾಯವನ್ನುಂಟು ಮಾಡಿದರೆ, ಅವನು 2 ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ 1,000/- ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಭಾರತೀಯ ದಂಡ ಸಂಹಿತೆ ಕಲಂ 304(ಎ): ನಿರ್ಲಕ್ಷ್ಯದಿಂದ ಮರಣವನ್ನುಂಟು ಮಾಡುವುದು:- ಯಾವನೇ ವ್ಯಕ್ತಿಯು ಅಪರಾಧಿಕ ಮಾನವ ಹತ್ಯೆಯೆಂದು ಪರಿಗಣಿಸಲಾಗದ ಯಾವುದೇ ದುಡುಕಿನ ಅಥವಾ ನಿರ್ಲಕ್ಷ್ಯದ ಕೃತ್ಯವನ್ನು ಮಾಡಿ ಯಾವನೇ ವ್ಯಕ್ತಿಯ ಮರಣವನ್ನುಂಟು ಮಾಡಿದರೆ, ಅವನು 2 ವರ್ಷಗಳವರೆಗಿನ ಅವಧಿಯ ಎರಡರಲ್ಲೊಂದು ಬಗೆಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

13. ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಅಭಿಯೋಜನೆಯ ಪರ ಮೌಖಿಕ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಪ್ರಸ್ತುತ ಈ ಪ್ರಕರಣದ ಫಿರ್ಯಾದುದಾರರು ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ-1 ರವರನ್ನು ಪ್ರಾಸಾ-1 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತನಗೆ ಮೃತ ಅತಿಕ್ ರೆಹಮಾನ್ ಗೊತ್ತು ಎಂದು, ಸದರಿರವರಿಗೆ 7-8 ವರ್ಷಗಳ ಹಿಂದೆ ಚಿತ್ರಹಳ್ಳಿ ಮತ್ತು ಶಿವಗಂಗ ನಡುವೆ ಅಪಘಾತವಾಗಿದ್ದು, ಇಬ್ಬರ ತಪ್ಪಿನಿಂದಲೂ ಅಪಘಾತವಾಗಿರುತ್ತದೆ ಎಂದು ನುಡಿದಿರುತ್ತಾರೆ. ಅಪಘಾತವಾದಾಗ ತನಗೆ ಜ್ಞಾನ ತಪ್ಪಿದ್ದು, ತಾನು ಎಚ್ಚರವಾದಾಗ ಆಸ್ಪತ್ರೆಯಲ್ಲಿದ್ದು, ತನಗೆ ಕಣ್ಣಿನ ಹತ್ತಿರ ಪೆಟ್ಟಾಗಿದ್ದು, ಮೂಳೆ ಮುರಿತ ಆಗಿತ್ತು ಎಂದು ನುಡಿದಿರುತ್ತಾರೆ. ತನಗೆ ಲಾರಿಯ ಸಂಖ್ಯೆ ಗೊತ್ತಿಲ್ಲವೆಂದು, ಅಂತೆಯೆ ತಾವು ಹೋಗುತ್ತಿದ್ದ ಓಮಿನಿ ಸಂಖ್ಯೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ನಿಪಿ-1 ರ ದೂರಿಗೆ ಆಸ್ಪತ್ರೆಯಲ್ಲಿ ಸಹಿ ಮಾಡಿದ್ದು, ಅದರಲ್ಲಿ ಏನು ಬರೆದಿದೆ ಎಂದು ತನಗೆ ಗೊತ್ತಿಲ್ಲ ವೆಂದು, ಪೊಲೀಸರು ಅದನ್ನು ತನಗೆ ಓದಿ ಹೇಳಿಲ್ಲವೆಂದು ನುಡಿದಿರುತ್ತಾರೆ.

14. ಈ ಮೇಲ್ಕಂಡ ಪ್ರಾಸಾ-1 ರವರನ್ನು ಸಹಾಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ದಿನಾಂಕ 23.12.2010 ರಂದು ತಾನು ಮತ್ತು ಮೇಲೆ ಹೇಳಿದವರು ಬೆಳಗಿನ ಜಾವ 03.00 ಗಂಟೆಗೆ, ಹೊಳಲ್ಕೆರೆ ಕಡೆಯಿಂದ ಚಿತ್ರದುರ್ಗಕ್ಕೆ ಹೋಗಲು ಹೊಳಲ್ಕೆರೆಯ ಟೌನಿನ ಮುಖ್ಯ ವೃತ್ತದಲ್ಲಿ ನಿಂತಿದ್ದೇವು ಎಂಬುದನ್ನು ಒಪ್ಪಿರುತ್ತಾರೆ. ಸದರಿ ದಿನದಂದು ಚನ್ನಗಿರಿ ಕಡೆಯಿಂದ ಪೆಪರ್ ವ್ಯಾನ್ ಬಂದಿದ್ದು, ಸದರಿ ವ್ಯಾನಿನಲ್ಲಿ ತಾವು ಹತ್ತಿಕೊಂಡೆವು ಎಂದು ಒಪ್ಪಿದ್ದು, ಸದರಿ ವ್ಯಾನು ಯಾವುದು ಎಂದು ತನಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಸದರಿ ದಿನದಂದು ಶಿವಗಂಗ-ಚಿತ್ರಹಳ್ಳಿಯ ಎನ್.ಹೆಚ್.13 ರ ರಸ್ತೆಯಲ್ಲಿ ತಾವು ಹೋಗುತ್ತಿದ್ದ ಓಮಿನಿ ವಾಹನವು ಲಾರಿಯನ್ನು ಓವರ್ ಟೇಕ್ ಮಾಡಲು ಹೋಗಿ ಅತಿವೇಗವಾಗಿ ಚಾಲನೆ ಮಾಡಿದ್ದು, ಮುಂದಿನ ಯಾವುದೋ ವಾಹನಕ್ಕೆ ಡಿಕ್ಕಿಪಡಿಸಿತು ಎಂದರೆ, ತಾನು ನೋಡಿಲ್ಲವೆಂದು ನುಡಿದಿರುತ್ತಾರೆ. ಮುಂದೆ ಹೋಗುತ್ತಿದ್ದ ಲಾರಿಗೆ ಹಿಂಬದಿಯಲ್ಲಿ ತಮ್ಮ ವಾಹನ ತಗುಲಿತು ಎಂಬುದನ್ನು ಒಪ್ಪಿರುತ್ತಾರೆ. ತಾನು ಹೋಗುತ್ತಿದ್ದ ವ್ಯಾನ್ ಅರ್ಧ ಭಾಗ ಲಾರಿಯ ಕೆಳಗೆ ಸಿಕ್ಕಿಹಾಕಿಕೊಂಡಿತ್ತು ಎಂಬುದನ್ನು ಒಪ್ಪಿರುತ್ತಾರೆ. ವ್ಯಾನಿನ ಚಾಲಕ, ಸಹಾಯಕ, ಮಧ್ಯದ ಸೀಟೀನಲ್ಲಿ ಕುಳಿತಿದ್ದ ಅತಿಕ್ ಮತ್ತು ಯೋಗರಾಜ ಸ್ಥಳದಲ್ಲಿ ಮೃತಪಟ್ಟರು ಎಂಬುದನ್ನು ಒಪ್ಪಿರುತ್ತಾರೆ. ತನಗೆ ಸೊಂಟಕ್ಕೆ ಮತ್ತು ಎರಡು ಕಾಲುಗಳಿಗೆ ಪೆಟ್ಟಾಗಿದ್ದು, ಚಾಸಾ-24 ರವರಿಗೆ ತಲೆಗೆ ಮತ್ತು ಮುಖಕ್ಕೆ ಪೆಟ್ಟಾಗಿತ್ತು ಎಂಬುದನ್ನು ಒಪ್ಪಿರುತ್ತಾರೆ. ವ್ಯಾನಿನ ಸಂಖ್ಯೆ-ಕೆ.ಎ.02-ಎನ್. 2099 ಎಂಬುದರ ಕುರಿತು ಗೊತ್ತಿಲ್ಲವೆಂದು, ಮುಂದೆ ಹೋಗುತ್ತಿದ್ದ ಲಾರಿಯ ಸಂಖ್ಯೆ -ಕೆ.ಎ.16-ಎ.9243 ಇರಬಹುದು ಎಂದು ನುಡಿದಿರುತ್ತಾರೆ. ತಾವು ಹೋಗುತ್ತಿದ್ದ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು, ನಿಪಿ-1 ರಂತೆ ಚಿತ್ರದುರ್ಗ ಆಸ್ಪತ್ರೆಯಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂಬುದನ್ನು ಅಲ್ಲಗಳೆದಿರುತ್ತಾರೆ.

15. ಈ ಮೇಲ್ಕಂಡ ಪ್ರಾಸಾ-1 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ಅಪಘಾತದಲ್ಲಿ ಗಾಯಗೊಂಡಂತಹ ಸಾಕ್ಷಿದಾರರಾಗಿದ್ದು, ತನ್ನ ಮುಖ್ಯ ವಿಚಾರಣೆಯಲ್ಲಿ, ಅಪಘಾತವು ಇಬ್ಬರ ತಪ್ಪಿನಿಂದಲೂ ಆಗಿರುತ್ತದೆ ಎಂದು ಹೇಳಿದ್ದು, ಆದಾಗ್ಯೂ ದೂರಿನಲ್ಲಿ ಬರೆದಿರುವಂತಹ ವಿಚಾರಗಳ ಕುರಿತು ತನಗೆ ಗೊತ್ತಿಲ್ಲವೆಂದು, ಪೊಲೀಸರು ಸದರಿ ದೂರಿನಲ್ಲಿನ ಅಂಶಗಳ ಕುರಿತು ತನಗೆ ಓದಿ ಹೇಳಿಲ್ಲವೆಂದು

ನುಡಿದಿರುತ್ತಾರೆ. ಈ ಮೇಲ್ಕಂಡ ಅಂಶಗಳನ್ನು ನಿಪಿ-1 ರ ದೂರಿನ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ಮೇಲ್ಕಂಡ ಪೆಪರ್ ವ್ಯಾನಿನ ಚಾಲಕನು ಎನ್.ಹೆಚ್.13 ರ ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದು, ಶಿವಗಂಗ-ಚಿತ್ರಹಳ್ಳಿ ಗ್ರಾಮಗಳ ಮಧ್ಯೆ, ಅತಿಜೋರಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದು, ರಸ್ತೆಯಲ್ಲಿ ಮುಂದೆ ಒಂದು ಲಾರಿ ಹೋಗುತ್ತಿದ್ದು, ಸದರಿ ಲಾರಿಯನ್ನು ಹಿಂದಕ್ಕೆ ಹಾಕಲು ಹೋಗುತ್ತಿದ್ದಾಗ, ಎದುರುಗಡೆಯಿಂದ ಯಾವುದೋ ಒಂದು ವಾಹನ ಬಂದಿದ್ದ ರಿಂದ ವ್ಯಾನನ್ನು ರಸ್ತೆಯ ಎಡಗಡೆಗೆ ತೆಗೆದುಕೊಂಡು, ಮುಂದೆ ಹೋಗುತ್ತಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆಸಿದನು ಎಂದು ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ಈ ಅಪಘಾತವು ಮಾರುತಿ ಓಮಿನಿ ವಾಹನದ ಚಾಲಕನ ನಿರ್ಲಕ್ಷ್ಯತನದಿಂದ ಸಂಭವಿಸಿದ್ದು, ಈ ಕುರಿತು ಕಾನೂನಿನ ಕ್ರಮವನ್ನು ತೆಗೆದುಕೊಳ್ಳಲು ಕೋರಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ನಿಪಿ-1 ರಲ್ಲಿನ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಅಪಘಾತವು ಕೆ.ಎ.02-ಎನ್.2099 ರ ಓಮಿನಿ ವಾಹನದ ಚಾಲಕನಾದ ಮೃತ 1 ನೇ ಆರೋಪಿತನ ತಪ್ಪಿನಿಂದ ಏರ್ಪಟ್ಟಿರುವುದು ಕಂಡುಬರುತ್ತದೆ. ಹಾಗಾಗಿ ಅಪಘಾತಕ್ಕೆ 2 ನೇ ಆರೋಪಿತನ ನಿರ್ಲಕ್ಷ್ಯತೆಯ ಕಾರಣ ಇರುತ್ತದೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ರವರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ತಾವು ಹೋಗುತ್ತಿದ್ದ ಓಮಿನಿ ವಾಹನ ಲಾರಿಯನ್ನು ಓವರ್ ಟೇಕ್ ಮಾಡಲು ಹೋಗಿ, ಅತಿವೇಗವಾಗಿ ಚಾಲನೆ ಮಾಡಿದ್ದು, ಮುಂದಿನ ಯಾವುದೋ ವಾಹನಕ್ಕೆ ಡಿಕ್ಕಿಪಡಿಸಿತ್ತು ಎಂಬುದರ ಕುರಿತು ಪ್ರಶ್ನಿಸಿರುವುದು ಕಂಡುಬರುತ್ತದೆ. ಅಂತೆಯೆ ತಾವು ಹೋಗುತ್ತಿದ್ದ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ನಿಪಿ-1 ರಂತೆ ದೂರನ್ನು ಕೊಟ್ಟಿರು ತ್ತೆನೆಂದು ಪ್ರಶ್ನಿಸಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಪರಿಶೀಲಿಸ ಲಾಗಿ, ಅಭಿಯೋಜನೆಯ ಪ್ರಕರಣದಂತೆ ಅಪಘಾತವು ಮೃತ 1 ನೇ ಆರೋಪಿತನ ತಪ್ಪಿನಿಂದ ಏರ್ಪಟ್ಟಿರುವುದು ಕಂಡುಬರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಆದ್ದರಿಂದ ಅಪಘಾತವು 2 ನೇ ಆರೋಪಿತ ನಿರ್ಲಕ್ಷ್ಯತೆಯಿಂದ ಏರ್ಪಟ್ಟಿರುತ್ತದೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

16. ಪ್ರಸ್ತುತ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಗಾಯಾಳು ಸಾಕ್ಷಿದಾರರಾದ ಚಾಸಾ-24 ರವರನ್ನು ಪ್ರಾಸಾ-2 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತನಗೆ ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಗೊತ್ತಿಲ್ಲವೆಂದು ಮತ್ತು ಮೃತ 1 ನೇ ಆರೋಪಿ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ದಿನಾಂಕ 10.12.2010 ರಂದು ಬೆಳಗಿನ ಜಾವ 02.30 ರ ಸಮಯದಲ್ಲಿ, ತಾನು, ಹತಿಕ್, ಯೋಗೀಶ್ ಮತ್ತು ಇತರರು, ಹೊಳಲ್ಕೆರೆ ಕಡೆಯಿಂದ ಚಿತ್ರದುರ್ಗ ಕಡೆಗೆ ಓಮಿನಿ ವಾಹನದಲ್ಲಿ ಹೋಗುತ್ತಿದ್ದು, ಚಿತ್ರಹಳ್ಳಿ-ಶಿವಗಂಗ ಮಧ್ಯದಲ್ಲಿ ಲಾರಿ ಮತ್ತು ತಮ್ಮ ವಾಹನದ ಮಧ್ಯೆ ಅಪಘಾತ ಸಂಭವಿಸಿದ್ದು, ಸದರಿ ಅಪಘಾತದಲ್ಲಿ ತನ್ನ ಬಲಗಾಲಿಗೆ, ಬಲಗೈಗೆ ಮತ್ತು ಮುಖಕ್ಕೆ ಗಾಯಗಳಾಗಿದ್ದು, ತಾನು ನಾಲ್ಕು ಹಲ್ಲುಗಳನ್ನು ಕಳೆದುಕೊಂಡಿದ್ದು, ಸದರಿ ಅಪಘಾತವು ಲಾರಿ ಚಾಲಕನ ತಪ್ಪಿನಿಂದ ಸಂಭವಿಸಿದ್ದು, ಅಪಘಾತಕ್ಕೀಡಾದ ವಾಹನಗಳ ಸಂಖ್ಯೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ.

17. ಈ ಮೇಲ್ಕಂಡ ಪ್ರಾಸಾ-2 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ದಿನಾಂಕ 23.12.2010 ರಂದು ತಾವೆಲ್ಲರೂ ಹಲಗೇರಿ ಮಾರ್ಕಟೆಗೆ ಹೋಗಲು ಕೆ.ಎ.02-ಎನ್.2099 ರ ಓಮಿನಿ ವ್ಯಾನಿನಲ್ಲಿ ರಾತ್ರಿ 02.00 ರಿಂದ 02.30 ರ ಗಂಟೆಗೆ ಹೋರೆಟಿದ್ದೇವು ಎಂಬುದನ್ನು ಒಪ್ಪಿರುತ್ತಾರೆ. ಸದರಿ ವಾಹನದ ಮುಂದಿನ ಸೀಟಿನಲ್ಲಿ ನಾಗರಾಜು ಮತ್ತು ಪೆಪರ್ ವ್ಯಾನಿನ ಸಹಾಯಕ ಕುಳಿತಿದ್ದು, ಮಧ್ಯದ ಸೀಟಿನಲ್ಲಿ ಅತಿಕ್ ಮತ್ತು ಯೋಗೀಶ್ ಕುಳಿತಿದ್ದು, ತಾನು ಮತ್ತು ಜಗದೀಶ್ ಹಿಂದಿನ ಸೀಟಿನಲ್ಲಿ ಕುಳಿತಿದ್ದೇವು ಎಂಬುದರ ಕುರಿತು ಗೊತ್ತಿಲ್ಲವೆಂದು ನುಡಿದಿರುತ್ತಾರೆ. ತಾವೆಲ್ಲರೂ ಪೆಪರ್ ವ್ಯಾನಿನಲ್ಲಿ ಹೋಗುತ್ತಿದ್ದಾಗ, ಕಣಿವೆಯ ಬಳಿ ನಾಗರಾಜು ವ್ಯಾನನ್ನು ನಿಲ್ಲಿಸಿ, ಮೂತ್ರ ವಿಸರ್ಜನೆ ಮಾಡಿ, ಸಿಗರೇಟು ಸೇದುತ್ತೇನೆ, ವ್ಯಾನನ್ನು ಓಡಿಸು ಎಂದು ಪ್ರದೀಪನಿಗೆ ತಿಳಿಸಿದ್ದನು ಎಂಬುದನ್ನು ಒಪ್ಪಿರುತ್ತಾರೆ. ವ್ಯಾನನ್ನು ಪ್ರದೀಪನಿಗೆ ಓಡಿಸಲು ಕೊಟ್ಟು, ನಾಗಜರಾಜು ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತುಕೊಂಡು, ಸೀಗರೇಟನ್ನು ಸೇದುತ್ತಿದ್ದನು ಎಂಬುದನ್ನು ಒಪ್ಪಿರುತ್ತಾರೆ. ಪ್ರದೀಪನು ವ್ಯಾನನ್ನು ಜೋರಾಗಿ ಓಡಿಸುತ್ತಿದ್ದರಿಂದ, ತಾನು ಮತ್ತು ಯೋಗೀಶ್ ತಮಗೆನು

ಅವಸರವಿಲ್ಲ, ನಿಧಾನಕ್ಕೆ ಹೋಗು ಎಂದು ತಿಳಿಸಿರುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಚಾಲಕನು ವೇಗವಾಗಿ ಓಮಿನಿ ವಾಹನವನ್ನು ಓಡಿಸುತ್ತಿದ್ದನು ಎಂಬುದನ್ನು ಒಪ್ಪಿರುತ್ತಾರೆ. ಶಿವಗಂಗಾ ದಾಟಿದ ನಂತರ, ಒಂದು ಲಾರಿಯು ಯಾವುದೇ ಸಿಗ್ನಲ್ ಮತ್ತು ಇಂಡಿಕೇಟರ್ ಹಾಕದೆ ಹೋಗುತ್ತಿತ್ತು ಎಂಬುದನ್ನು ಹಾಗೂ ಸದರಿ ಲಾರಿಯ ಚಾಲಕ ಯಾವುದೇ ಸಿಗ್ನಲ್ ನೀಡದೆ, ಏಕಾಏಕಿ ನಿಲ್ಲಿಸಿದ ಪರಿಣಾಮ, ತಮ್ಮ ವ್ಯಾನಿನ ಚಾಲಕ ನೋಡ-ನೋಡುತ್ತಿದ್ದಂತೆಯೆ ಎದುರುಗಡೆ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ತನಗೆ ಪೆಟ್ಟಾಗಿತ್ತು ಎಂಬುದನ್ನು ಒಪ್ಪಿರುತ್ತಾರೆ. ಅಪಘಾತವು ಲಾರಿಯ ಚಾಲಕ ಮತ್ತು ತಾವು ಪ್ರಯಾಣಿಸುತ್ತಿದ್ದ ಓಮಿನಿನ ಚಾಲಕನಾದ ಪ್ರದೀಪನ ಅತಿವೇಗ ಮತ್ತು ಅಜಾಗರೂಕತೆಯಿಂದ ಸಂಭವಿಸಿರುತ್ತದೆ ಎಂದು ತನಿಖಾಧಿಕಾರಿಗಳ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೆನೆ ಎಂಬುದನ್ನು ಒಪ್ಪಿರುತ್ತಾರೆ.

18. ಈ ಮೇಲ್ಕಂಡ ಪ್ರಾಸಾ-2 ರವರನ್ನು 2 ನೇ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ಓಮಿನಿ ವಾಹನದ ಚಾಲಕನಿಗೆ ತಾವು ನಿಧಾನವಾಗಿ ವಾಹನವನ್ನು ಓಡಿಸಿಕೊಂಡು ಹೋಗು ಎಂದು ತಿಳಿಸಿದ್ದರೂ ಸಹ, ಆತ ತಮ್ಮ ಮಾತನ್ನು ಕೇಳದೆ, ವಾಹನವನ್ನು ಅತಿವೇಗ ಮತ್ತು ಅಜಾಗೂಕರೆಯಿಂದ ಚಾಲನ ಮಾಡಿಕೊಂಡು ಹೋಗಿದ್ದನು ಎಂಬುದನ್ನು ಒಪ್ಪಿರುತ್ತಾರೆ. ಓಮೀನಿ ವಾಹನದ ಚಾಲಕ, ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು, ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿರುತ್ತಾನೆ ಎಂಬುದನ್ನು ಒಪ್ಪಿರುತ್ತಾರೆ.

19. ಈ ಮೇಲ್ಕಂಡ ಪ್ರಾಸಾ-2 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಅಪಘಾತವು ಲಾರಿಯ ಚಾಲಕನಾದ 2 ನೇ ಆರೋಪಿತನ ತಪ್ಪಿನಿಂದ ಏರ್ಪಟ್ಟಿರುವುದಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಪ್ರಾಸಾ-2 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ. ಕಣಿವೆಯ ಬಳಿ ನಾಗರಾಜು ವ್ಯಾನನ್ನು ನಿಲ್ಲಿಸಿ, ಮೂತ್ರ ವಿಸರ್ಜನೆ ಮಾಡಿ, ಸಿಗರೇಟು ಸೇದುತ್ತೇನೆ, ವ್ಯಾನನ್ನು ಓಡಿಸು ಎಂದು ಪ್ರದೀಪನಿಗೆ ತಿಳಿಸಿದ್ದನು ಎಂಬುದನ್ನು ಒಪ್ಪಿರುತ್ತಾರೆ. ವ್ಯಾನನ್ನು ಪ್ರದೀಪನಿಗೆ ಓಡಿಸಲು

ಕೊಟ್ಟು, ನಾಗಜರಾಜು ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತುಕೊಂಡು, ಸೀಗರೇಟನ್ನು ಸೇದುತ್ತಿದ್ದನು ಎಂಬುದನ್ನು ಒಪ್ಪಿರುತ್ತಾರೆ. ಪ್ರದೀಪನು ವ್ಯಾನನ್ನು ಜೋರಾಗಿ ಓಡಿಸುತ್ತಿದ್ದರಿಂದ, ತಾನು ಮತ್ತು ಯೋಗೀಶ್ ತಮಗೇನು ಅವಸರವಿಲ್ಲ, ನಿಧಾನಕ್ಕೆ ಹೋಗು ಎಂದು ತಿಳಿಸಿರುತ್ತೇವೆ ಎಂಬುದನ್ನು ಒಪ್ಪಿರುತ್ತಾರೆ. ಚಾಲಕನು ವೇಗವಾಗಿ ಓಮಿನಿ ವಾಹನವನ್ನು ಓಡಿಸುತ್ತಿದ್ದನು ಎಂಬುದನ್ನು ಒಪ್ಪಿರುತ್ತಾರೆ. ಶಿವಗಂಗಾ ದಾಟಿದ ನಂತರ, ಒಂದು ಲಾರಿಯು ಯಾವುದೇ ಸಿಗ್ನಲ್ ಮತ್ತು ಇಂಡಿಕೇಟರ್ ಹಾಕದೆ ಹೋಗುತ್ತಿತ್ತು ಎಂಬುದನ್ನು ಹಾಗೂ ಸದರಿ ಲಾರಿಯ ಚಾಲಕ ಯಾವುದೇ ಸಿಗ್ನಲ್ ನೀಡದೆ, ಏಕಾಏಕಿ ನಿಲ್ಲಿಸಿದ ಪರಿಣಾಮ, ತಮ್ಮ ವ್ಯಾನಿನ ಚಾಲಕ ನೋಡ-ನೋಡುತ್ತಿದ್ದಂತೆಯೆ ಎದುರುಗಡೆ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ತನಗೆ ಪೆಟ್ಟಾಗಿತ್ತು ಎಂಬುದನ್ನು ಒಪ್ಪಿರುತ್ತಾರೆ. ಈ ಮೇಲ್ಕಂಡ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಓಮಿನಿ ವಾಹನದ ಚಾಲಕನಾದ ಮೃತ 1 ನೇ ಆರೋಪಿತನು ಸದರಿ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಸಹಾಯಕ ಸರ್ಕಾರಿ ಅಭಿಯೋಜಕರ ಹೇಳಿಕೆಯನ್ನು ಪರಿಶೀಲಿಸಲಾಗಿ, ಮೃತ 1 ನೇ ಆರೋಪಿತನು ಎದುರುಗಡೆಯ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ ಪರಿಣಾಮವಾಗಿ ಪ್ರಶ್ನಿಸಿದ್ದು, ಸದರಿ ಹೇಳಿಕೆಯು ಸಂಪೂರ್ಣವಾಗಿ ದೋಷಾರೋಪಣಾ ಪಟ್ಟಿಯಲ್ಲಿನ ಹೇಳಿಕೆಗಳಿಗೆ ವ್ಯತಿರಿಕ್ತವಾಗಿರುವುದು ಕಂಡುಬರುತ್ತದೆ. ಹಾಗಾಗಿ ಅಪಘಾತವು 2 ನೇ ಆರೋಪಿತನ ನಿರ್ಲಕ್ಷ್ಯತೆಯಿಂದ ಏರ್ಪಟ್ಟಿರುತ್ತದೆ ಎಂಬುದರ ಕುರಿತು ಅಸ್ಪಷ್ಟತೆ ಕಂಡುಬರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಪ್ರಾಸಾ-2 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ಓಮಿನಿ ವಾಹನದ ಚಾಲಕನಿಗೆ ತಾವು ನಿಧಾನವಾಗಿ ವಾಹನವನ್ನು ಓಡಿಸಿಕೊಂಡು ಹೋಗು ಎಂದು ತಿಳಿಸಿದ್ದರೂ ಸಹ, ಆತ ತಮ್ಮ ಮಾತನ್ನು ಕೇಳದೆ, ವಾಹನವನ್ನು ಅತಿವೇಗ ಮತ್ತು ಅಜಾಗೂಕರೆಯಿಂದ ಚಾಲನೆ ಮಾಡಿಕೊಂಡು ಹೋಗಿದ್ದನು ಎಂಬುದನ್ನು ಒಪ್ಪಿರುತ್ತಾರೆ. ಓಮೀನಿ ವಾಹನದ ಚಾಲಕ, ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಬಂದು, ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿರುತ್ತಾನೆ ಎಂಬುದನ್ನು ಒಪ್ಪಿರುತ್ತಾರೆ. ಈ ಮೇಲ್ಕಂಡ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಅಪಘಾತವು ಮೃತ 1 ನೇ ಆರೋಪಿತನ ಅತಿವೇಗ ಮತ್ತು ಅಜಾಗರೂಕತೆಯಿಂದ ಏರ್ಪಟ್ಟಿರುತ್ತದೆ ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಅಪಘಾತಕ್ಕೆ 2 ನೇ ಆರೋಪಿತನ

ನಿರ್ಲಕ್ಷ್ಯತೆಯು ಸಹ ಕಾರಣ ಎಂಬುದರ ಕುರಿತು ಪರಿಗಣಿಸಲು ಬುರವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

20. ಪ್ರಸ್ತುತ ಈ ಪ್ರಕರಣದ ಮಹಜರಿನ ಸಾಕ್ಷಿದಾರರಾದ ಚಾಸಾ-22 ರವರನ್ನು ಪ್ರಾಸಾ-6 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ತನಗೆ ಚಾಸಾ-23 ರವರು ಗೊತ್ತಿಲ್ಲವೆಂದು, ಮಹಜರಿನ ಸಹಿಯನ್ನು 3 ವರ್ಷಗಳ ಹಿಂದೆ ಹೊಳಲ್ಕೆರೆಯ ಹೋಟೆಲಿನಲ್ಲಿ ಮಾಡಿದ್ದು, ಮಹಜರಿನಲ್ಲಿ ಬರೆದಿರುವ ವಿಚಾರಗಳ ಕುರಿತು ತನಗೆ ಗೊತ್ತಿಲ್ಲವೆಂದು, ತನ್ನ ಸಮಕ್ಷಮದಲ್ಲಿ ಯಾವುದೇ ಮಹಜರಿನ ಕ್ರಮವನ್ನು ಜರುಗಿಸಿಲ್ಲವೆಂದು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಮೇಲ್ಕಂಡ ಪ್ರಾಸಾ-6 ರವರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ದಾಗ್ಯೂ, ಮುಖ್ಯ ವಿಚಾರಣೆಯಲ್ಲಿನ ಅಂಶಗಳಿಗೆ ವ್ಯತಿರಿಕ್ತವಾಗಿ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ. ಹಾಗಾಗಿ ದಿನಾಂಕ 23.12.2010 ರಂದು ಚಾಸಾ-22 ಮತ್ತು 23 ರವರ ಸಮಕ್ಷಮ, ಬೆಳಿಗ್ಗೆ 11.00 ರಿಂದ 12 ಗಂಟೆಯವರೆಗೆ ಶಿವಗಂಗ-ಚಿತ್ರಹಳ್ಳಿ ಮಧ್ಯೆ, ಎನ್.ಹೆಚ್.13 ರ ರಸ್ತೆಯಲ್ಲಿ, ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

21. ಪ್ರಸ್ತುತ ಈ ಪ್ರಕರಣದ ಅಪಘಾತದಲ್ಲಿ ಒಳಪಟ್ಟ ಕೆ.ಎ.16-ಎ.9243 ರ ಲಾರಿಯ ಸಾಮಾನ್ಯ ಮುಕ್ತಿಯಾರನಾಮೆ ಮಾಲೀಕರಾದ ಚಾಸಾ-25 ರವರನ್ನು ಪ್ರಾಸಾ-3 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತಿಲ್ಲವೆಂದು, ಈ ಪ್ರಕರಣದ ಕುರಿತು ತನಗೆ ಯಾವುದೇ ಮಾಹಿತಿ ಇಲ್ಲವೆಂದು, ಪೊಲೀಸರು ತನ್ನನ್ನು ವಿಚಾರಣೆ ಮಾಡಿಲ್ಲವೆಂದು, ತಾನು ಈ ಕುರಿತು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲವೆಂದು ನುಡಿದಿರುತ್ತಾರೆ. ಈ ಮೇಲ್ಕಂಡ ಸಾಕ್ಷಿದಾರರನ್ನು ಸಹಾಯಕ ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ, ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ತಾನು ತನ್ನ ಪತ್ನಿಗೆ ಸೇರಿದ ಕೆ.ಎ.16-9243 ರ ನೋಂದಣಿ

ಸಂಖ್ಯೆಯ ಲಾರಿಯನ್ನು ತನ್ನ ಹೆಸರಿಗೆ ಸಾಮಾನ್ಯ ಮುಕ್ತಿಯಾರನಾಮೆಯನ್ನು ಮಾಡಿಸಿ ಕೊಂಡಿದ್ದು, ಸದರಿ ಲಾರಿಯ ಉಸ್ತುವಾರಿಯನ್ನು ತಾನೇ ನೋಡಿಕೊಳ್ಳುತಿದ್ದೇನು ಎಂದು ನುಡಿದಿರುತ್ತಾರೆ. ಉಳಿದಂತೆ ಇತರೆ ಅಂಶಗಳ ಕುರಿತು ಅಲ್ಲಗಳೆದಿರುತ್ತಾರೆ. ಹಾಗಾಗಿ ಚಾಸಾ-25 ರವರಿಗೆ ಸೇರಿದ ಮೇಲ್ಕಂಡ ಲಾರಿಯು ಅಪಘಾತಕ್ಕೆ ಒಳಪಟ್ಟಿತ್ತು ಎಂಬುದರ ಕುರಿತು ಪೂರ್ವಭಾವನೆಯನ್ನು ಮಾಡಲಾಗುತ್ತದೆಂದು ತೀರ್ಮಾನಕ್ಕೆ ಬರಲಾಗುತ್ತದೆ.

22. ಪ್ರಸ್ತುತ ಈ ಪ್ರಕರಣದ ಸಾಂದರ್ಭಿಕ ಸಾಕ್ಷಿದಾರರಾದ ಚಾಸಾ-26 ರವರನ್ನು ಪ್ರಾಸಾ-4 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 23.12.2010 ರಂದು ತಾನು ಮತ್ತು ತಮ್ಮ ಠಾಣೆಯ ಎ.ಎಸ್.ಐ. ರವರು ಬೆಳಗಿನ ಜಾವ 02.30 ರ ಸಮಯದಲ್ಲಿ, ರಾತ್ರಿ ಗಸ್ತು ಕರ್ತವ್ಯ ದಲ್ಲಿದ್ದಾಗ, ಹೊಳಲ್ಕೆರೆ ಟೌನಿನ ವಿ.ಜಿ. ಶೆಟ್ರು ಪೆಟ್ರೋಲ್ ಬಂಕ್ ಮುಂದಿರುವ, ಎ.ಪಿ.ಎಂ.ಸಿ. ತನಿಖಾ ಠಾಣಾ ಪಕ್ಕದಲ್ಲಿನ ಟೀ ಸ್ಟಾಲಿನಲ್ಲಿ, ಟೀ ಕುಡಿಯುತ್ತಿದ್ದಾಗ, ಒಂದು ಮೆಕ್ಕೆಜೋಳ ತುಂಬಿಕೊಂಡಿದ್ದ ಲಾರಿಯ ಚಾಲಕನು ಅಲ್ಲಿಗೆ ಟೀ ಕುಡಿಯಲು ಬಂದಿದ್ದು, ಸರಿಯಾಗಿ ಲೋಡು ಮಾಡಿರದ ಕಾರಣ, ತಾನು ಚಾಲಕನಿಗೆ ಸರಿಯಾಗಿ ಲೋಡು ಮಾಡದ ಕುರಿತು ಕೇಳಿದ್ದೇನೆಂದು ನುಡಿದಿರುತ್ತಾರೆ. ಸದರಿ ಲಾರಿಯ ಚಾಲಕನು ಟೀ ಕುಡಿದು, ಚಿತ್ರದುರ್ಗದ ಕಡೆಗೆ ಲಾರಿ ತೆಗೆದುಕೊಂಡು ಹೋಗಿದ್ದು, ಅದೇ ದಿನ ಬೆಳಿಗ್ಗೆ 03.00 ಗಂಟೆ ಸಮಯದಲ್ಲಿ, ಲಾರಿಗೆ ಓಮಿನಿ ವ್ಯಾನ್ ಹಿಂದಿನಿಂದ ಡಿಕ್ಕಿ ಹೊಡೆದು, ನಾಲ್ಕು ಜನ ಸ್ಥಳದಲ್ಲಿಯೇ ಮೃತಪಟ್ಟಿದ್ದು ತಿಳಿದು ಬಂದಿತ್ತು ಎಂದು ನುಡಿದಿರುತ್ತಾರೆ.

23. ಈ ಮೇಲ್ಕಂಡ ಪ್ರಾಸಾ-4 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ತಾನು ತಮ್ಮ ಎ.ಎಸ್.ಐ. ರವರೊಂದಿಗೆ ಸ್ಥಳಕ್ಕೆ ಹೋದಾಗಲೇ, ನವೀನರವರ ಲಾರಿಗೆ ಓಮಿನಿ ವ್ಯಾನ್ ಡಿಕ್ಕಿಪಡಿಸಿರುವ ವಿಚಾರ ತನಗೆ ಗೊತ್ತಾಗಿರುತ್ತದೆ ಎಂದು ಹಾಗೂ ಸದರಿ ವಿಚಾರವನ್ನು ತನ್ನ ಹೇಳಿಕೆಯಲ್ಲಿ ಹೇಳಿಲ್ಲವೆಂದು ನುಡಿದಿರುತ್ತಾರೆ. ತಾನು ಟೀ ಕುಡಿಯುತ್ತಿದ್ದಾಗ ಲಾರಿ ಸಂಖ್ಯೆಯನ್ನು ನೋಡಿರುವುದಿಲ್ಲ ಎಂಬುದನ್ನು ಒಪ್ಪಿರುತ್ತಾರೆ. ರಾತ್ರಿ

ಸಮಯದಲ್ಲಿ ಓಡಾಡುವ ಎಲ್ಲಾ ಲಾರಿಗಳ ಚಾಲಕರನ್ನು ತಾನು ಮಾತನಾಡಿಸುವುದಿಲ್ಲ ಎಂಬುದನ್ನು ಒಪ್ಪಿರುತ್ತಾರೆ. ತಾನು ಘಟನಾ ಸ್ಥಳಕ್ಕೆ ಹೋದ ಬಗ್ಗೆ ಯಾವುದಾದರೂ ದಾಖಲಾತಿಗಳ ಬಗ್ಗೆ ಸಹಿ ಮಾಡಿದ್ದೇನೆ ಎಂಬುದರ ಕುರಿತು ತನಗೆ ನೆನಪಿಲ್ಲವೆಂದು ನುಡಿದಿರುತ್ತಾರೆ. ತಾನು ಅಪಘಾತದ ಸ್ಥಳಕ್ಕೆ ಹೋದಾಗ, ಅಲ್ಲಿ ಲಾರಿ ಚಾಲಕ ಇರಲಿಲ್ಲವೆಂದು ನುಡಿದಿರುತ್ತಾರೆ. ನಿಂತಿದ್ದ ಲಾರಿಗೆ ಓಮಿನಿ ಚಾಲಕ ಬಂದು ಡಿಕ್ಕಿಪಡಿಸಿರುತ್ತಾನೆಂದು ನುಡಿದಿರುತ್ತಾರೆ. ತನಗೆ ಖುದ್ದಾಗಿ ಲಾರಿಯನ್ನು ಯಾರೂ ಓಡಿಸುತ್ತಿದ್ದರು ಎಂದು ಗೊತ್ತಿಲ್ಲವೆಂದು ನುಡಿದಿರುತ್ತಾರೆ.

24. ಈ ಮೇಲ್ಕಂಡ ಪ್ರಾ.ಸಾ-4 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ಅಪಘಾತದ ಪೂರ್ವದಲ್ಲಿ 2 ನೇ ಆರೋಪಿತನನ್ನು ನೋಡಿದ್ದ ಕುರಿತು ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದಾಗ್ಯೂ ಪ್ರಾ.ಸಾ-4 ರವರ ಪಾಟೀ ಸವಾಲಿನಲ್ಲಿನ ಹೇಳಿಕೆಗಳನ್ನು ಪರಿಶೀಲಿಸಲಾಗಿ, ಅಪಘಾತದ ಸಮಯದಲ್ಲಿ 2 ನೇ ಆರೋಪಿತರು ಲಾರಿಯನ್ನು ಚಾಲನೆ ಮಾಡುತ್ತಿದ್ದರು ಎಂಬುದರ ಕುರಿತು ಗೊತ್ತಿಲ್ಲವೆಂದು ನುಡಿದಿರುವುದು ಕಂಡುಬರುತ್ತದೆ. ಅಂತೆಯೆ ಪ್ರಾ.ಸಾ-4 ರವರು ಅಪಘಾತದ ಕುರಿತಾದ ಪ್ರತ್ಯಕ್ಷ ಸಾಕ್ಷಿದಾರರು ಅಲ್ಲ ಎಂಬುದು ಸಹ ಕಂಡುಬರುತ್ತದೆ. ಹಾಗಾಗಿ ಪ್ರಾ.ಸಾ-4 ರವರ ಸಾಕ್ಷ್ಯದ ಆಧಾರದಲ್ಲಿ 2 ನೇ ಆರೋಪಿತರ ವಿರುದ್ದದ ಆರೋಪಣೆಯ ಕುರಿತಾಗಿ ರುಜುವಾತುಪಡಿಸಿರುತ್ತಾರೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

25. ಪ್ರಸ್ತುತ ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ-36 ರವರನ್ನು ಪ್ರಾ.ಸಾ-7 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 23.12.2010 ರಂದು ಬೆಳಿಗ್ಗೆ 05.15 ರಿಂದ 06.00 ಗಂಟೆಯವರೆಗೆ, ಚಿತ್ರದುರ್ಗದ ಜಿಲ್ಲಾ ಆಸ್ಪತ್ರೆಯಲ್ಲಿ ಚಾಸಾ-1 ರವರ ಹೇಳಿಕೆಯನ್ನು ಪಡೆದುಕೊಂಡು ಬಂದು, ಅದೇ ದಿನ ಬೆಳಿಗ್ಗೆ 07.00 ಗಂಟೆಗೆ ಠಾಣಾ ಮೊಕದ್ದಮೆ ಸಂಖ್ಯೆ-770/2010 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ವರದಿ ಮಾಡಿರುವುದಾಗಿ ನುಡಿದಿರುತ್ತಾರೆ. ಅದೇ ದಿನ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ಕೊಟ್ಟು, ಮೃತ ಅತಿಕ್

ಊರ್ ರೆಹಮಾನ್‌ರವರ ಶವತನಿಖಾ ವರದಿಯನ್ನು ತಯಾರಿಸಿರುವುದಾಗಿ ನುಡಿದಿರುತ್ತಾರೆ.

26. ಈ ಮೇಲ್ಕಂಡ ಪ್ರಾಸಾ-7 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ಅಪಘಾತದ ಕುರಿತು ತನಗೆ ತಮ್ಮ ಠಾಣಾಧಿಕಾರಿಗಳು ಬೆಳಗಿನ ಜಾವ ಸುಮಾರು 05.00 ಗಂಟೆಗೆ ಮಾಹಿತಿಯನ್ನು ನೀಡಿರುತ್ತಾರೆಂದು ನುಡಿದಿರುತ್ತಾರೆ. ಆಸ್ಪತ್ರೆಗೆ ತಾನು ಒಬ್ಬನೆ ಬೆಳಿಗ್ಗೆ 05.15 ಕ್ಕೆ ಹೋಗಿದ್ದು, ಬೆಳಿಗ್ಗೆ 05.15 ರಿಂದ 06.00 ಗಂಟೆಯವರೆಗೆ ದೂರುದಾರರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ನಿಪಿ-1 ರಲ್ಲಿ, ಮೇಲ್ಕಂಡ ಪೆಪರ್ ವ್ಯಾನಿನ ಚಾಲಕನು ಎನ್.ಹೆಚ್.13 ರ ರಸ್ತೆಯಲ್ಲಿ ಚಾಲನೆ ಮಾಡಿಕೊಂಡು ಬರುತ್ತಿದ್ದು, ಶಿವಗಂಗ-ಚಿತ್ರಹಳ್ಳಿ ಗ್ರಾಮಗಳ ಮಧ್ಯೆ, ಅತಿಜೋರಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿದ್ದು, ರಸ್ತೆಯಲ್ಲಿ ಮುಂದೆ ಒಂದು ಲಾರಿ ಹೋಗುತ್ತಿದ್ದು, ಸದರಿ ಲಾರಿಯನ್ನು ಹಿಂದಕ್ಕೆ ಹಾಕಲು ಹೋಗುತ್ತಿದ್ದಾಗ, ಎದುರುಗಡೆಯಿಂದ ಯಾವುದೋ ಒಂದು ವಾಹನ ಬಂದಿದ್ದರಿಂದ, ವ್ಯಾನನ್ನು ರಸ್ತೆಯ ಎಡಗಡೆ ತೆಗೆದುಕೊಂಡು, ಮುಂದೆ ಹೋಗುತ್ತಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆಸಿದನು ಎಂದು ನಮೂದು ಇರುವುದು ಕಂಡುಬರುತ್ತದೆ. ಅಂತೆಯೆ ಈ ಅಪಘಾತವು ಮಾರುತಿ ಓಮಿನಿ ವಾಹನದ ಚಾಲಕನ ನಿರ್ಲಕ್ಷ್ಯತನದಿಂದ ಸಂಭವಿಸಿದ್ದು, ಈ ಕುರಿತು ಕಾನೂನಿನ ಕ್ರಮವನ್ನು ತೆಗೆದುಕೊಳ್ಳಲು ಕೋರಿರುವ ಬಗ್ಗೆ ಉಲ್ಲೇಖ ಇದೆ ಎಂಬುದನ್ನು ಒಪ್ಪಿರುತ್ತಾರೆ. ಈ ಮೇಲ್ಕಂಡಂತೆ ನಿಪಿ-1 ರ ದೂರಿನ ಅನುಗುಣವಾಗಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುತ್ತೇನೆ ಎಂಬುದನ್ನು ಒಪ್ಪಿರುತ್ತಾರೆ. ನಿಪಿ-19 ರ ಪ್ರಥಮ ವರ್ತಮಾನ ವರದಿಯ ಖಂಡಿಕೆ-6 ರಲ್ಲಿ ಕೆ.ಎ.02-ಎನ್. 2099 ರ ಮಾರುತಿ ಓಮಿನಿ ಚಾಲಕನ ಹೆಸರು ಮತ್ತು ವಿಳಾಸ ತಿಳಿಯಬೇಕಾಗಿರುತ್ತದೆ ಎಂದು ಉಲ್ಲೇಖ ಮಾಡಿರುತ್ತೇನೆ ಎಂಬುದನ್ನು ಒಪ್ಪಿರುತ್ತಾರೆ. ನಿಪಿ-19 ರ ಖಂಡಿಕೆ-11 ರಲ್ಲಿಯೂ ಸಹ ಕೆ.ಎ.02-ಎನ್.2099 ರ ಮಾರುತಿ ಓಮಿನಿ ಚಾಲಕನು, ಸದರಿ ವಾಹನವನ್ನು ಎನ್.ಹೆಚ್.13 ರ ರಸ್ತೆಯಲ್ಲಿ, ಹೊಳಲ್ಕೆರೆಯಿಂದ ಚಿತ್ರದುರ್ಗದ ಕಡೆಗೆ, ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಹೋಗಿ, ಅಪಘಾತ ಮಾಡಿರುವ ಕುರಿತು ಉಲ್ಲೇಖ ಇದೆ ಎಂಬುದನ್ನು ಒಪ್ಪಿರುತ್ತಾರೆ. ನಿಪಿ-1 ರ ದೂರಿನಲ್ಲಿ

ಮತ್ತು ನಿಪಿ-19 ರ ಪ್ರಥಮ ವರ್ತಮಾನ ವರದಿಯಲ್ಲಿ ಲಾರಿ ಚಾಲಕನ ವಿರುದ್ದ ಯಾವುದೇ ಆರೋಪಣೆ ಇಲ್ಲ ಎಂಬುದನ್ನು ಒಪ್ಪಿರುತ್ತಾರೆ.

27. ಈ ಮೇಲ್ಕಂಡ ಪ್ರಾಸಾ-7 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ಪ್ರಾಸಾ-1 ರವರು ನೀಡಿದಂತಹ ದೂರನ್ನು ದಾಖಲಿಸಿಕೊಂಡು, ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿರುವ ಕುರಿತು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದಾಗ್ಯೂ ಪ್ರಾಸಾ-7 ರವರ ಪಾಟೀ ಸವಾಲಿನಲ್ಲಿನ ಅಂಶಗಳ ಕುರಿತು ಪರಿಶೀಲಿಸಲಾಗಿ, ಮೃತ 1 ನೇ ಆರೋಪಿತನು ಓಮಿನಿ ವಾಹನವನ್ನು ಅತಿವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿದ್ದು, ಎದುರುಗಡೆಯಿಂದ ಯಾವುದೋ ವಾಹನ ಬಂದಿದ್ದರಿಂದ ವ್ಯಾನನ್ನು ರಸ್ತೆಯ ಎಡಭಾಗಕ್ಕೆ ತೆಗೆದುಕೊಂಡು, ಮುಂದೆ ಹೋಗುತ್ತಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ಹಾಗಾಗಿ ಸದರಿ ಲಾರಿಯ ಚಾಲಕನು ಲಾರಿಯನ್ನು ಅಲ್ಲೆ ನಿಲ್ಲಿಸಿದ್ದು, ಅಪಘಾತವು ಮಾರುತಿ ಓಮಿನಿ ವಾಹನದ ಚಾಲಕನ ಅತಿವೇಗ ಮತ್ತು ಅಜಾಗರೂಕತೆಯಿಂದ ಉಂಟಾಗಿರುತ್ತದೆ ಎಂದು ನಿಪಿ-1 ರಲ್ಲಿ ಉಲ್ಲೇಖ ಇದೆ ಎಂಬುದನ್ನು ಒಪ್ಪಿರುತ್ತಾರೆ. ಅಂತೆಯೆ ಪ್ರಥಮ ವರ್ತಮಾನ ವರದಿ ಯಲ್ಲೂ ಸಹ ಮೃತ 1 ನೇ ಆರೋಪಿತನ ವಿರುದ್ದ ಪ್ರಕರಣ ದಾಖಲಾಗಿರುವುದನ್ನು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ಅಪಘಾತವು ಮೃತ 1 ನೇ ಆರೋಪಿತನ ಅತಿವೇಗ ಮತ್ತು ಅಜಾಗರೂಕತೆಯಿಂದ ಉಂಟಾಗಿರುತ್ತದೆ ಎಂಬುದು ಕಂಡುಬರುತ್ತದೆ. ಆದ್ದರಿಂದ ಸದರಿ ಅಪಘಾತಕ್ಕೆ 2 ನೇ ಆರೋಪಿತನ ನಿರ್ಲಕ್ಷ್ಯತೆಯೂ ಸಹ ಕಾರಣ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

28. ಪ್ರಸ್ತುತ ಈ ಪ್ರಕರಣದ ಮತ್ತೋರ್ವ ತನಿಖಾಧಿಕಾರಿಯಾದ ಚಾಸಾ-38 ರವರನ್ನು ಪ್ರಾಸಾ-5 ಎಂದು ಸಾಕ್ಷ್ಯ ಮಾಡಿಸಿದ್ದು, ಸದರಿ ಸಾಕ್ಷಿದಾರರು ತನ್ನ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 23.12.2010 ರಂದು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಭೇಟಿ ನೀಡಿದ್ದು, ಅಪಘಾತದಲ್ಲಿ ಮೃತಪಟ್ಟಂತಹ ನಾಲ್ಕು ದೇಹಗಳಿದ್ದು, ಮೃತ ದೇಹಗಳ ಶವ ತನಿಖಾ ವರದಿಯನ್ನು ಪಡೆದುಕೊಳ್ಳಲು ಚಾಸಾ-34, 36 ಮತ್ತು 37 ರವರಿಗೆ ತಿಳಿಸಿದ್ದು, ತಾನು ಮೃತ ಯೋಗರಾಜರವರ ಶವ ತನಿಖಾ ವರದಿಯನ್ನು

ಜರುಗಿಸಿರುವುದಾಗಿ ನುಡಿದಿರುತ್ತಾರೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಚಾಸಾ-22 ಮತ್ತು 23 ರವರ ಸಮಕ್ಷಮ, ಬೆಳಿಗ್ಗೆ 11.00 ರಿಂದ 12.00 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿ, ಅಪಘಾತಕ್ಕೀಡಾದ ಕೆ.ಎ.02-ಎನ್.2099 ರ ಓಮಿನಿ ವಾಹನವನ್ನು ಮತ್ತು ಕೆ.ಎ.16-ಎನ್.9243 ರ ಲಾರಿಯನ್ನು ಅಮಾನತ್ತು ಪಡಿಸಿಕೊಂಡು, ಕಚ್ಚಾ ನಕ್ಷೆಯನ್ನು ತಯಾರಿಸಿ, ಛಾಯಾಚಿತ್ರ ತೆಗೆದಿರುವುದಾಗಿ ನುಡಿದಿರುತ್ತಾರೆ. ದಿನಾಂಕ 28.12.2010 ರಂದು ಮೃತ ಅತಿಕ್ ಅಹಮದ್, ಯೋಗಿಶ್ ಮತ್ತು ಪ್ರದೀಪರವರ ಶವ ಪರೀಕ್ಷಾ ವರದಿಗಳನ್ನು ಪಡೆದುಕೊಂಡಿದ್ದು, ದಿನಾಂಕ 29.12.2010 ರಂದು ಮೃತ ನಾಗರಾಜರವರ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿರುವುದಾಗಿ ನುಡಿದಿರುತ್ತಾರೆ. ದಿನಾಂಕ 21.01.2011 ರಂದು ಅಪಘಾತಕ್ಕೀಡಾದ ವಾಹನಗಳ ಐ.ಎಂ.ವಿ. ವರದಿಯನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಅದೇ ದಿನ ಲಾರಿ ಮಾಲೀಕರಾದ ಚಾಸಾ-25 ರವರು ಠಾಣೆಗೆ ಹಾಜರಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಸದರಿರವರಿಂದ ಇಂಡಿಮಿನಿಟಿ ಬಾಂಡನ್ನು ಪಡೆದುಕೊಂಡು, ಲಾರಿಯನ್ನು ಸದರಿರವರಿಗೆ ಮಧ್ಯಂತರ ವಶಕ್ಕೆ ನೀಡಿರುವುದಾಗಿ ನುಡಿದಿರುತ್ತಾರೆ. ದಿನಾಂಕ 01.01.2012 ರಂದು ಓಮಿನಿ ಕಾರಿನ ಮಾಲೀಕರಾದ ಚಾಸಾ-15 ರವರು ಠಾಣೆಗೆ ಹಾಜರಾಗಿ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಸದರಿರವರಿಂದ ಇಂಡಿಮಿನಿಟಿ ಬಾಂಡನ್ನು ಪಡೆದುಕೊಂಡು, ಓಮಿನಿ ಕಾರನ್ನು ಸದರಿರವರಿಗೆ ಮಧ್ಯಂತರ ವಶಕ್ಕೆ ನೀಡಿರುವುದಾಗಿ ನುಡಿದಿರುತ್ತಾರೆ. ದಿನಾಂಕ 02.03.2011 ರಂದು ಚಾಸಾ-24 ರವರ ಹೇಳಿಕೆಯನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. ದಿನಾಂಕ 17.06.2011 ರಂದು ಚಾಸಾ-24 ರವರ ಗಾಯದ ಪ್ರಮಾಣ ಪತ್ರವನ್ನು ಮತ್ತು ದಿನಾಂಕ 28.06.2011 ರಂದು ಚಾಸಾ-1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಾಗಿ ನುಡಿದಿರುತ್ತಾರೆ. 2 ನೇ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, 1 ನೇ ಆರೋಪಿತರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆಂದು ನುಡಿದಿರುತ್ತಾರೆ.

29. ಈ ಮೇಲ್ಕಂಡ ಪ್ರಾಸಾ-5 ರವರನ್ನು ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ತನ್ನ ಪಾಟೀ ಸವಾಲಿನಲ್ಲಿ, ತಾನು ಕೃತ್ಯ ನಡೆದ ಸ್ಥಳಕ್ಕೆ ಬೆಳಿಗ್ಗೆ

10.30 ಕ್ಕೆ ಹೋಗಿದ್ದು, ಸ್ಥಳ ಪಂಚನಾಮೆಗೆ ಪಂಚರನ್ನು ತಮ್ಮ ಸಿಬ್ಬಂದಿಗಳು ಕರೆದುಕೊಂಡು ಬಂದಿದ್ದು, ಆದಾಗ್ಯೂ ಯಾರು ಕರೆದುಕೊಂಡು ಬಂದರು ಎಂದು ನೆನಪಿಲ್ಲವೆಂದು ನುಡಿದಿರುತ್ತಾರೆ. ಪಂಚರಾದ ಚಾಸಾ-22 ಮತ್ತು 23 ರವರನ್ನು ಎಲ್ಲಿಂದ ಕರೆದುಕೊಂಡು ಬಂದರು ಎಂಬ ಬಗ್ಗೆ ಗೊತ್ತಿಲ್ಲವೆಂದು ನುಡಿದಿರುತ್ತಾರೆ. ಮಹಜರಿನಲ್ಲಿ ಘಟನಾ ಸ್ಥಳದ ಸ್ಥಿತಿ-ಗತಿಯ ಕುರಿತು ಮಾತ್ರ ಉಲ್ಲೇಖ ಮಾಡಿರುತ್ತೇನೆಂದು ನುಡಿದಿರುತ್ತಾರೆ. ನಿಪಿ-3 ರ ಮಹಜರಿನಲ್ಲಿ ಅಪಘಾತ ಮಾಡಿದ ಮಾರುತಿ ಓಮಿನಿ ವ್ಯಾನ್ ಲಾರಿಗೆ ಸಿಕ್ಕಿಕೊಂಡು ಪೂರ್ವಾಭಿಮುಖವಾಗಿ ನಿಂತಿತ್ತು ಎಂದು ಉಲ್ಲೇಖ ಇದೆ ಎಂಬುದನ್ನು ಒಪ್ಪಿರುತ್ತಾರೆ. ಮಾರುತಿ ಓಮಿನಿ ವಾಹನದ ಮತ್ತು ಲಾರಿಯ ಕುರಿತು ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಸಿ.ಡಿ.ಯನ್ನು ಹಾಜರುಪಡಿಸಿಲ್ಲ ಎಂದು ನುಡಿದಿರುತ್ತಾರೆ. ಅಂತಿಮ ವರದಿಯನ್ನು ಸಲ್ಲಿಸುವ ಪೂರ್ವ ದಲ್ಲಿ ಎಲ್ಲಾ ದಾಖಲಾತಿಗಳನ್ನು ಸಹ ಪರಿಶೀಲನೆ ಮಾಡಿರುವುದಾಗಿ ನುಡಿದಿರುತ್ತಾರೆ. ನಿಪಿ-1 ರ ದೂರಿನಲ್ಲಿ, ಒಂದು ಲಾರಿ ಹೋಗುತ್ತಿದ್ದು, ಸದರಿ ಲಾರಿಯನ್ನು ಪಕ್ಕಕ್ಕೆ ಹಾಕಲು ಮುಂದೆ ಹೋಗುತ್ತಿದ್ದಾಗ, ಎದುರುಗಡೆಯಿಂದ ಯಾವುದೋ ಒಂದು ವಾಹನ ಬಂದಿದ್ದರಿಂದ, ವ್ಯಾನನ್ನು ರಸ್ತೆಯ ಎಡಗಡೆಗೆ ತೆಗೆದುಕೊಂಡು, ಮುಂದೆ ಹೋಗುತ್ತಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿ ಹೊಡೆಸಿದನು ಎಂದು ಹಾಗೂ ಈ ಅಪಘಾತವು ಮಾರುತಿ ಓಮಿನಿ ಚಾಲಕನ ನಿರ್ಲಕ್ಷ್ಯತನದಿಂದ ಸಂಭವಿಸಿರುತ್ತದೆ ಎಂದು ಮತ್ತು ಈ ಬಗ್ಗೆ ಕಾನೂನು ರೀತಿಯ ಕ್ರಮ ಕೈಗೊಳ್ಳಲು ಬೇಡುತ್ತೇನೆ ಎಂದು ನಮೂದು ಇದೆ ಎಂಬುದನ್ನು ಒಪ್ಪಿರುತ್ತಾರೆ. ಪ್ರಥಮ ವರ್ತಮಾನ ವರದಿಯಲ್ಲಿ 2 ನೇ ಆರೋಪಿತನ ಕುರಿತು ಉಲ್ಲೇಖ ಇಲ್ಲ ಎಂಬುದನ್ನು ಒಪ್ಪಿರುತ್ತಾರೆ. ತಾನು ದಿನಾಂಕ 23.12.2010 ರಂದು ಚಾಸಾ-10 ರವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಸದರಿ ಹೇಳಿಕೆಯಲ್ಲಿ, ಮಾರುತಿ ಓಮಿನಿ ಕೆ.ಎ.02-ಎನ್.2099 ರ ಚಾಲಕ ನಾಗರಾಜನು ಮಾರುತಿ ವ್ಯಾನನ್ನು ಹೊಳಲ್ಕೆರೆ ಕಡೆಯಿಂದ ಚಿತ್ರದುರ್ಗದ ಕಡೆಗೆ ಅತಿಜೋರಾಗಿ ಮತ್ತು ಅಜಾಗರೂಕತೆ ಯಿಂದ ಚಲಾಯಿಸಿಕೊಂಡು ಹೋಗಿ, ಮುಂದೆ ಹೋಗುತ್ತಿದ್ದ ಕೆ.ಎ.16-ಎ.9243 ರ ಲಾರಿಯ ಹಿಂಭಾಗ ಡಿಕ್ಕಿಪಡಿಸಿದ ಪರಿಣಾಮ, ಲಾರಿ ಕೆಳಗೆ ವ್ಯಾನ್ ಸಿಕ್ಕಿಕೊಂಡು, ಅದರಲ್ಲಿ ಪ್ರಯಾಣಿಸುತ್ತಿದ್ದವರು ಮೃತಪಟ್ಟಿರುತ್ತಾರೆಂದು ಉಲ್ಲೇಖ ಇದೆ ಎಂಬುದನ್ನು ಒಪ್ಪಿರುತ್ತಾರೆ. ಸ್ಥಳ ಪರಿಶೀಲನೆಯ ಕಾಲಕ್ಕೆ ಕಂಡುಬಂದ ಕಾರಣ, 2 ನೇ ಆರೋಪಿ ನಿರ್ಲಕ್ಷ್ಯತನದಿಂದ ಯಾವುದೇ ಸೂಚನೆ ನೀಡದೆ, ಏಕಾಏಕಿ ಲಾರಿಯನ್ನು ರಸ್ತೆ ಮಧ್ಯೆ

ನಿಲ್ಲಿಸಿದ್ದ ಕಾರಣ, ಹಿಂದಿನಿಂದ ಬಂದ 1 ನೇ ಆರೋಪಿ ತನ್ನ ಮಾರುತಿ ಓಮಿನಿ ವಾಹನವನ್ನು ನಿರ್ಲಕ್ಷ್ಯತನದಿಂದ ಚಾಲಾಯಿಸಿ, ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದರ ಕುರಿತು ಉಲ್ಲೇಖ ಇದೆ ಎಂದು ನುಡಿದಿರುತ್ತಾರೆ. 36 ಸಾಕ್ಷಿದಾರರ ಪೈಕಿ ಯಾವುದೇ ಸಾಕ್ಷಿದಾರರು ಸಹ 2 ನೇ ಆರೋಪಿತನ ವಿರುದ್ಧ ಯಾವುದೇ ಹೇಳಿಕೆಯನ್ನು ನೀಡದಿದ್ದಾಗ್ಯೂ ಹಾಗೂ ತನ್ನ ತನಿಖೆಯ ಕಾಲದಲ್ಲಿ ಯಾವುದೇ ಸಾಕ್ಷ್ಯದ ಲಭ್ಯತೆ ಇಲ್ಲದಿದ್ದಾಗ್ಯೂ, 2 ನೇ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂಬುದನ್ನು ಒಪ್ಪಿರುತ್ತಾರೆ. ದೋಷಾರೋಪಣಾ ಪಟ್ಟಿಯ 17 ನೇ ಖಂಡಿಕೆಯಲ್ಲಿ ಹೊರತುಪಡಿಸಿ, ಇತರೆ ಯಾವುದೇ ದಾಖಲಾತಿಗಳಲ್ಲಿ 2 ನೇ ಆರೋಪಿತರ ವಿರುದ್ಧ ಯಾವುದೇ ಆರೋಪದ ಕುರಿತು ಉಲ್ಲೇಖ ಇಲ್ಲ ಎಂಬುದನ್ನು ಒಪ್ಪಿರುತ್ತಾರೆ.

30. ಈ ಮೇಲ್ಕಂಡ ಪ್ರಾ.ಸಾ-5 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ಪ್ರಾ.ಸಾ-7 ರವರಿಂದ ಕಡತವನ್ನು ಪಡೆದುಕೊಂಡ ನಂತರದಲ್ಲಿ ತನಿಖೆಯನ್ನು ಮುಂದುವರೆಸಿ, 2 ನೇ ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಈ ಕುರಿತು ಪ್ರಾ.ಸಾ-7 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ದೂರಿನಲ್ಲಿ ಮತ್ತು ಪ್ರಥಮ ವರ್ತಮಾನ ವರದಿಯಲ್ಲಿ ಮೃತ 1 ನೇ ಆರೋಪಿತನ ವಿರುದ್ಧ ಆರೋಪಣೆ ಇದ್ದು, ಮೃತ 1 ನೇ ಆರೋಪಿತನ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುವುದು ಕಂಡುಬರುತ್ತದೆ. ನಿಪಿ-1 ರ ದೂರು ಮತ್ತು ನಿಪಿ-19 ರ ಪ್ರಥಮ ವರ್ತಮಾನ ವರದಿಯಲ್ಲಿ 2 ನೇ ಆರೋಪಿತನ ವಿರುದ್ಧ ಯಾವುದೇ ಆರೋಪಣೆ ಇಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಹಾಗಾಗಿ ಪ್ರಾ.ಸಾ-5 ರವರು ಯಾವ ಸಾಕ್ಷ್ಯದ ಆಧಾರದಲ್ಲಿ 2 ನೇ ಆರೋಪಿತನನ್ನು ದೋಷಾರೋಪಣಾ ಪಟ್ಟಿಯಲ್ಲಿ ಸೇರ್ಪಡೆ ಮಾಡಿರುತ್ತಾರೆ ಎಂಬುದರ ಕುರಿತು ಪರಿಗಣಿಸುವಂತಹ ಅಗತ್ಯತೆ ಇರುತ್ತದೆ. ಅಭಿಯೋಜನೆಯ ಪರವಾಗಿ ಹಾಜರುಪಡಿಸಿರುವಂತಹ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಪ್ರಸ್ತುತ ಈ ಪ್ರಕರಣದ ಫಿರ್ಯಾದುದಾರರು ಮತ್ತು ಗಾಯಾಳು ಸಾಕ್ಷಿದಾರರಾದ ಪ್ರಾ.ಸಾ-1 ಮತ್ತು 2 ರವರು 2 ನೇ ಆರೋಪಿತನ ವಿರುದ್ಧ ನೀಡಿರುವಂತಹ ಹೇಳಿಕೆಯ ಕುರಿತು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದಕ್ಕೆ ಪ್ರತಿಯಾಗಿ ಪ್ರಾ.ಸಾ-1 ರವರು ನೀಡಿರುವಂತಹ ದೂರಿನಲ್ಲಿ 1 ನೇ ಆರೋಪಿತನ ವಿರುದ್ಧ ಆರೋಪಣೆ ಇರುವುದು

ಕಂಡುಬರುತ್ತದೆ. ಪ್ರಾಸಾ-1 ಮತ್ತು 2 ರವರ ಮೌಖಿಕ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ಅಪಘಾತವು ಮೃತ 1 ನೇ ಆರೋಪಿತನ ಅತಿವೇಗ ಮತ್ತು ನಿರ್ಲಕ್ಷ್ಯತೆಯಿಂದ ಏರ್ಪಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ನಿಪಿ-2 ರಂತೆ ಹಾಜರುಪಡಿಸಿರುವ ಪ್ರಾಸಾ-3 ರವರ ಹೇಳಿಕೆಯ ಆಧಾರದಲ್ಲಿ, 2 ನೇ ಆರೋಪಿತನನ್ನು ಸೇರ್ಪಡೆ ಮಾಡಿರುವ ಕುರಿತು ಪ್ರಾಸಾ-5 ರವರು ಸಾಕ್ಷ್ಯ ನುಡಿದಿದ್ದು, ಸದರಿ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ಪ್ರತಿಯಾಗಿ ಪ್ರಾಸಾ-1 ಮತ್ತು 2 ರವರು ಮೃತ 1 ನೇ ಆರೋಪಿತನು ಓಮಿನಿ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅಪಘಾತಪಡಿಸಿರುವ ಕುರಿತು ಕಂಡುಬರುತ್ತದೆ. ಈ ಅಂಶಗಳ ಹಿನ್ನಲೆಯಲ್ಲಿ ಪ್ರಾಸಾ-5 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ದಿನಾಂಕ 23.12.2010 ರಂದು ಚಾಸಾ-10 ರವರು ನೀಡಿರುವ ಹೇಳಿಕೆಯಂತೆ, ಮೃತ ನಾಗರಾಜರವರು ಓಮಿನಿ ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂಬುದು ಕಂಡುಬರುತ್ತದೆ. ಆದರೆ ಪ್ರಾಸಾ-1 ಮತ್ತು 2 ರವರ ಹೇಳಿಕೆಯಂತೆ ಹಾಗೂ ಸಾಕ್ಷ್ಯದಂತೆ, ಅಪಘಾತದ ಸಮಯದಲ್ಲಿ ಮೃತ ಪ್ರದೀಪ ರವರು ವಾಹನವನ್ನು ಚಾಲನೆ ಮಾಡುತ್ತಿದ್ದರು ಎಂಬುದು ಕಂಡುಬರುತ್ತದೆ. ಹಾಗಾಗಿ ಪ್ರಾಸಾ-5 ರವರ ತನಿಖಾ ಪ್ರಕ್ರಿಯೆಯ ಕುರಿತು ನ್ಯಾಯಾಲಯಕ್ಕೆ ಸಂಶಯ ಉಂಟಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಪ್ರಾಸಾ-5 ರವರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಂತಹ ತನಿಖಾಧಿಕಾರಿಯಾಗಿದ್ದು, ಪ್ರಸ್ತುತ ಈ ಅಪಘಾತದಲ್ಲಿ ನಾಲ್ಕು ಜನ ಮೃತಪಟ್ಟಿದ್ದು, ಆದಾಗ್ಯೂ ಛಾಯಾಚಿತ್ರಗಳಿಗೆ ಸಂಬಂಧಿಸಿದಂತೆ ಸಿ.ಡಿ. ಯನ್ನು ಹಾಜರುಪಡಿಸದಿರುವುದು ಕಂಡಬರುತ್ತದೆ. ಹಾಗಾಗಿ ಈ ಅಂಶವು ಕೂಡ ಪ್ರಾಸಾ-5 ರವರ ತನಿಖಾ ಪ್ರಕ್ರಿಯೆಯ ಕುರಿತು ತನಿಖಾಧಿಕಾರಿಗಳು ಸಮರ್ಪಕವಾಗಿ ತನಿಖೆಯನ್ನು ಮಾಡದಿರುವ ಬಗ್ಗೆ ಕಂಡುಬರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ಪ್ರಾಸಾ-5 ರವರ ಹೇಳಿಕೆಯಂತೆಯೆ, ದೋಷಾರೋಪಣಾ ಪಟ್ಟಿಯ 17 ನೇ ಖಂಡಿಕೆಯಲ್ಲಿ ಹೊರತುಪಡಿಸಿ, 2 ನೇ ಆರೋಪಿತನ ವಿರುದ್ಧದ ಆರೋಪಣೆಯ ಕುರಿತು ಇತರೆ ಯಾವುದೇ ದಾಖಲಾತಿಗಳಲ್ಲೂ ಉಲ್ಲೇಖ ಇಲ್ಲ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿ, 2 ನೇ ಆರೋಪಿತನ ನಿರ್ಲಕ್ಷ್ಯತೆಯು ಸಹ ಅಪಘಾತಕ್ಕೆ ಕಾರಣವಾಗಿರುತ್ತದೆ ಎಂಬುದರ ಕುರಿತು ಪರಿಗಣಿಸಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ.

31. ಈ ಮೇಲ್ಕಂಡ ಅಭಿಯೋಜನೆಯ ಮೌಖಿಕ ಸಾಕ್ಷ್ಯದ ನಂತರದಲ್ಲಿ ದಾಖಲಾತಿ ಸಾಕ್ಷ್ಯದ ಕುರಿತು ಪರಿಶೀಲಿಸಲಾಗಿ, ನಿಪಿ-1 ರಿಂದ 19 ರವರೆಗೆ ದಾಖಲಾತಿಗಳನ್ನು ಹಾಜರುಪಡಿಸಿ ನಿಶಾನಿಸಿರುತ್ತಾರೆ. ನಿಪಿ-1 ರಂತೆ ಪ್ರಾಸಾ-1 ರವರು ಅಪಘಾತದ ಕುರಿತಾಗಿ ದಿನಾಂಕ 23.12.2010 ರಂದು ನೀಡಿರುವಂತಹ ದೂರನ್ನು ಹಾಜರುಪಡಿಸಿರುತ್ತಾರೆ. ಸದರಿ ದೂರನ್ನು ಪರಿಶೀಲಿಸಲಾಗಿ, ದಿನಾಂಕ 23.12.2010 ರಂದು ಬೆಳಗಿನ ಜಾವ 03.00 ಗಂಟೆ ಸಮಯದಲ್ಲಿ, ಚಿತ್ರದುರ್ಗಕ್ಕೆ ಹೋಗಲು ನಾಲ್ಕು ಜನರು ವ್ಯಾನಿನಲ್ಲಿ ಕುಳಿತಿದ್ದು, ಚಾಲಕನು ಎನ್.ಹೆಚ್.13 ರ ರಸ್ತೆಯಲ್ಲಿ, ಸದರಿ ವ್ಯಾನನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದು, ಚಾಲಕನ ಪಕ್ಕದ ಸೀಟಿನಲ್ಲಿ ಸಹಾಯಕನಾಗಿ ಕೆಲಸ ಮಾಡುವ ವ್ಯಕ್ತಿಯು ಕುಳಿತುಕೊಂಡಿದ್ದು, ವ್ಯಾನನ್ನು ಚಾಲಕನು ಎನ್.ಹೆಚ್.13 ರ ರಸ್ತೆಯಲ್ಲಿ, ಶಿವಗಂಗ-ಚಿತ್ರಹಳ್ಳಿ ಗ್ರಾಮಗಳ ಮಧ್ಯದಲ್ಲಿ ಅತೀವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಬರುತ್ತಿದ್ದು, ರಸ್ತೆಯಲ್ಲಿ ಮುಂದುಗಡೆ ಒಂದು ಲಾರಿ ಹೋಗುತ್ತಿದ್ದು, ಸದರಿ ಲಾರಿಯನ್ನು ಹಿಂದಿಕ್ಕಲು ಮುಂದೆ ಹೋಗುತ್ತಿ ದ್ದಾಗ, ಎದುರುಗಡೆಯಿಂದ ಯಾವುದೋ ಒಂದು ವಾಹನ ಬಂದಿದ್ದರಿಂದ, ವ್ಯಾನನ್ನು ರಸ್ತೆಯ ಎಡಗಡೆಗೆ ತೆಗೆದುಕೊಂಡು, ಮುಂದೆ ಹೋಗುತ್ತಿದ್ದ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದು, ಮುಂದೆ ಹೋಗುತ್ತಿದ್ದ ಲಾರಿಯ ಚಾಲಕನು ಸದರಿ ಲಾರಿಯನ್ನು ಅಲ್ಲೇ ನಿಲ್ಲಿಸಿದ್ದು, ತಾನು ಕೆಳಗಿಳಿದು ನೋಡಲಾಗಿ, ತಾವು ಕುಳಿತು ಪ್ರಯಾಣಿಸುತ್ತಿದ್ದ ಮಾರುತಿ ವ್ಯಾನು ಲಾರಿಯ ಕೆಳಗೆ ಅರ್ಧ ಭಾಗ ಸಿಕ್ಕಿ ಹಾಕಿಕೊಂಡು ಪೂರ್ಣ ಜಖಂ ಗೊಂಡಿದ್ದು, ವ್ಯಾನಿನ ಮುಂದೆ ಕುಳಿತಿದ್ದ ಚಾಲಕ ಮತ್ತು ಸಹಾಯಕ ಹಾಗೂ ಮಧ್ಯದ ಸೀಟಿನಲ್ಲಿ ಕುಳಿತಿದ್ದ ಅತಿಕ್ ಮತ್ತು ಯೋಗರಾಜರವರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಹಾಗಾಗಿ ಸದರಿ ಅಪಘಾತವು ಮಾರುತಿ ಓಮಿನಿ ಚಾಲಕನ ನಿರ್ಲಕ್ಷ್ಯತನದಿಂದ ಸಂಭವಿಸಿದ್ದು, ಈ ಕುರಿತು ಕಾನೂನಿನ ರೀತ್ಯ ಕ್ರಮವನ್ನು ಕೈಗೊಳ್ಳಲು ಕೋರಿರುವುದು ಕಂಡುಬರುತ್ತದೆ. ಈ ಮೇಲ್ಕಂಡ ನಿಪಿ-1 ರ ದೂರಿನ ಅಂಶಗಳ ಕುರಿತಾಗಿ, ಫಿರ್ಯಾದು ದಾರರು ಮತ್ತು ಗಾಯಾಳು ಸಾಕ್ಷಿದಾರರಾದ ಪ್ರಾಸಾ-1 ಮತ್ತು 2 ರವರ ಸಾಕ್ಷ್ಯದ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ಪ್ರಾಸಾ-1 ರವರು ತಾನು ನೀಡಿದಂತಹ ದೂರಿನಲ್ಲಿನ ಹೇಳಿಕೆಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಪ್ರಾಸಾ-2 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಅಪಘಾತದ ಸಮಯದಲ್ಲಿ ವ್ಯಾನನ್ನು ಪ್ರದೀಪರವರು

ಚಾಲನೆ ಮಾಡುತ್ತಿದ್ದರು ಎಂಬುದು ಕಂಡುಬರುತ್ತದೆ. ಅಂತೆಯೆ ಅಪಘಾತವು ಮೃತ 1 ನೇ ಆರೋಪಿತನ ಅತಿವೇಗ ಮತ್ತು ಅಜಾಗರೂಕತೆಯಿಂದ ಏರ್ಪಟ್ಟಿರುತ್ತದೆ ಎಂದು ನುಡಿದಿರುತ್ತಾರೆ. ಹಾಗಾಗಿ ಈ ಮೇಲ್ಕಂಡ ನಿಪಿ-1 ರ ದೂರಿನ ಕುರಿತಾಗಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-2 ರಂತೆ ಪ್ರಾಸಾ-3 ರವರ ಅಲ್ಲಗಳೆದ ಹೇಳಿಕೆಯನ್ನು ಹಾಜರುಪಡಿಸಿದ್ದು, ಈ ಕುರಿತು ಪ್ರಾಸಾ-3 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ನಿಪಿ-2 ರ ದಾಖಲಾತಿಯ ಕುರಿತಾಗಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-3 ಮತ್ತು 4 ರಂತೆ ದಿನಾಂಕ 23.12.2010 ರಂದು ಚಾಸಾ-22 ಮತ್ತು 23 ರವರ ಸಮಕ್ಷಮ, ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಅಪಘಾತ ನಡೆದ ಸ್ಥಳದಲ್ಲಿ ಮಹಜರನ್ನು ಜರುಗಿಸಿದ ಕುರಿತಾದ ಮತ್ತು ಸದರಿ ಮಹಜರಿನ ಕಾಲಕ್ಕೆ ತಯಾರಿಸಿದ ಕಚ್ಚಾ ನಕ್ಷೆಯ ಕುರಿತಾದ ದಾಖಲಾತಿಗಳಾಗಿರುತ್ತವೆ. ಈ ಕುರಿತು ಪ್ರಾಸಾ-6 ರವರ ಸಾಕ್ಷ್ಯವನ್ನು ಪರಿಶೀಲಿಸಲಾಗಿ, ಸದರಿ ಸಾಕ್ಷಿದಾರರು ಸಂಪೂರ್ಣವಾಗಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಉಳಿದಂತೆ ತನಿಖಾಧಿಕಾರಿಗಳು ಮಹಜರಿನ ಕಾಲಕ್ಕೆ ತೆಗೆದಂತಹ ಛಾಯಾಚಿತ್ರಗಳ ಕುರಿತಾಗಿ ಸಿ.ಡಿ.ಯನ್ನು ಹಾಜರುಪಡಿಸದ ಕಾರಣ, ಸದರಿ ಛಾಯಾ ಚಿತ್ರಗಳನ್ನು ನಿಶಾನಿಸಿರುವುದಿಲ್ಲ. ಹಾಗಾಗಿ ಛಾಯಾಚಿತ್ರಗಳ ಅಲಭ್ಯತೆಯ ಹಿನ್ನಲೆಯಲ್ಲಿ ಮತ್ತು ಪ್ರಾಸಾ-6 ರವರ ಸಾಕ್ಷ್ಯದ ಹಿನ್ನಲೆಯಲ್ಲಿ ಪರಿಶೀಲಿಸಲಾಗಿ, ನಿಪಿ-3 ರ ಮಹಜರಿನ ಪ್ರಕ್ರಿಯೆಯ ಕುರಿತು ಮತ್ತು ನಿಪಿ-4 ರ ಕಚ್ಚಾ ನಕ್ಷೆಯಲ್ಲಿನ ನಮೂದುಗಳ ಕುರಿತು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಪೂರ್ವಭಾವನೆಯನ್ನು ಮಾಡಲು ಬರುವುದಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-5 ಮತ್ತು 15 ರಿಂದ 18 ರಂತೆ ಮೃತ ಪ್ರದೀಪ ರಾವ್ ಜಾದವ್, ಮೃತ ನಾಗರಾಜ್, ಮೃತ ಯೋಗರಾಜ್ ಮತ್ತು ಮೃತ ಅತಿಕ್ ಆರ್. ರೆಹಮಾನ್ ರವರ ಶವ ತನಿಖಾ ವರದಿಗಳನ್ನು ಹಾಜರು ಪಡಿಸಿದ್ದು, ಸದರಿ ದಾಖಲಾತಿಗಳ ಕುರಿತು ಪರಿಶೀಲಿಸಲಾಗಿ, ಈ ಮೇಲ್ಕಂಡ ಮೃತರು ಅಪಘಾತದ ಪರಿಣಾಮ ಮೃತಪಟ್ಟಿರುವ ಕುರಿತು ಯಾವುದೇ ತಕರಾರು ಇರುವುದಿಲ್ಲ. ಹಾಗಾಗಿ ಸದರಿ ತನಿಖಾ ಪ್ರಕ್ರಿಯೆಯ ಕುರಿತು ಅಭಿಯೋಜನೆಯ ಪ್ರಕರಣಕ್ಕೆ ಪೂರಕ

ವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-6 ರಿಂದ 9 ರಂತೆ ಮೃತ ಪ್ರದೀಪ ರಾವ್ ಜಾದವ್, ಮೃತ ನಾಗರಾಜ್, ಮೃತ ಯೋಗರಾಜ್ ಮತ್ತು ಮೃತ ಅತಿಕ್ ಆರ್. ರೆಹಮಾನ್ ರವರಿಗೆ ಸಂಬಂಧಿಸಿದ ಶವ ಪರೀಕ್ಷಾ ವರದಿಗಳನ್ನು ಹಾಜರುಪಡಿಸಿದ್ದು, ಅದರಂತೆ ಮೃತರು ಅಪಘಾತದ ಪರಿಣಾಮ ಮರಣ ಹೊಂದಿರುವುದು ಕಂಡುಬರುತ್ತದೆ. ಸದರಿರವರು ಅಪಘಾತದಲ್ಲಿ ಮೃತಪಟ್ಟಿರುವ ಕುರಿತಾಗಿ ಯಾವುದೇ ತಕರಾರು ಇರುವುದಿಲ್ಲ. ಹಾಗಾಗಿ ಸದರಿ ದಾಖಲಾತಿಯ ಕುರಿತು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-10 ರಂತೆ ಅಪಘಾತಕ್ಕೆ ಒಳಪಟ್ಟ ವಾಹನಗಳ ಕುರಿತಾದ ವಾಹನ ತಪಸಣಾ ವರದಿಯನ್ನು ಹಾಜರುಪಡಿಸಿದ್ದು, ಸದರಿ ವರದಿಯಂತೆ, ಅಪಘಾತವು ಯಾಂತ್ರಿಕ ಕಾರಣದಿಂದ ಉಂಟಾಗಿರುವುದಿಲ್ಲವೆಂಬುದು ಕಂಡುಬರುತ್ತದೆ. ಸದರಿ ವರದಿಯ ಕುರಿತಾಗಿ ಯಾವುದೇ ತಕರಾರು ಇಲ್ಲದ ಕಾರಣ ಅಪಘಾತವು ಯಾಂತ್ರಿಕ ಕಾರಣದಿಂದ ಉಂಟಾಗಿಲ್ಲವೆಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-11 ಮತ್ತು 12 ರಂತೆ ಅಪಘಾತಕ್ಕೆ ಒಳಪಟ್ಟ ವಾಹನಗಳನ್ನು ಮಧ್ಯಂತರ ವಶಕ್ಕೆ ಪಡೆದುಕೊಳ್ಳುವ ಕಾಲಕ್ಕೆ, ಚಾಸಾ-25 ಮತ್ತು ಈಶ್ವರ ಬಿನ್ ರಾಮಯ್ಯರವರು ಜಾರಿಮಾಡಿಕೊಟ್ಟಂತಹ ಇಂಡಿಮಿನಿಟಿ ಬಾಂಡುಗಳನ್ನು ಹಾಜರುಪಡಿಸಿದ್ದು, ಸದರಿ ತನಿಖಾ ಪ್ರಕ್ರಿಯೆಗಳ ಕುರಿತು ಯಾವುದೇ ತಕರಾರು ಇರುವುದಿಲ್ಲ. ಹಾಗಾಗಿ ಈ ಮೇಲ್ಕಂಡ ದಾಖಲಾತಿಗಳ ಕುರಿತಾಗಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-13 ಮತ್ತು 14 ರಂತೆ ಚಾಸಾ-1 ಮತ್ತು 24 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿರುತ್ತಾರೆ. ಈಗಾಗಲೇ ಮೇಲ್ಕಂಡಂತೆ ಚರ್ಚಿಸಲಾಗಿ ಅಪಘಾತದಲ್ಲಿ ಚಾಸಾ-1 ಮತ್ತು 24 ರವರು ಗಾಯಗೊಂಡಿರುವ ಕುರಿತು ಯಾವುದೇ ತಕರಾರು ಇರುವುದಿಲ್ಲ. ಹಾಗಾಗಿ ಸದರಿ ದಾಖಲಾತಿಗಳ ಕುರಿತಾಗಿ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಪೂರ್ವಭಾವನೆಯನ್ನು ಮಾಡಲಾಗುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ. ನಿಪಿ-19 ರಂತೆ ಪ್ರಾಸಾ-1 ರವರು ನೀಡಿದಂತಹ ದೂರಿನ ಆಧಾರದಲ್ಲಿ ಆರೋಪಿತರ ವಿರುದ್ದ ದಾಖಲಿಸಿರುವಂತಹ ಪ್ರಥಮ ವರ್ತಮಾನ ವರದಿಯನ್ನು ಹಾಜರುಪಡಿಸಿರುತ್ತಾರೆ. ಈ ಮೇಲ್ಕಂಡ ದಾಖಲಾತಿಯ ಕುರಿತು ಪರಿಶೀಲಿಸಲಾಗಿ, ಪ್ರಾಸಾ-1 ರವರು ಮೃತ 1 ನೇ ಆರೋಪಿತನ ವಿರುದ್ದ

ದೂರನ್ನು ನೀಡಿದ್ದು, ಸದರಿ ದೂರಿನ ಆಧಾರದಲ್ಲಿ ನಿಪಿ-19 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದ್ದು, ಆದಾಗ್ಯೂ ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣಾ ಪಟ್ಟಿಯಲ್ಲಿ 2 ನೇ ಆರೋಪಿತರ ನಿರ್ಲಕ್ಷ್ಯದ ಕುರಿತು ಉಲ್ಲೇಖಿಸಿ, 2 ನೇ ಆರೋಪಿತರನ್ನು ಸೇರ್ಪಡೆ ಮಾಡಿರುವುದು ಕಂಡುಬರುತ್ತದೆ. ಆದಾಗ್ಯೂ 2 ನೇ ಆರೋಪಿತನ ವಿರುದ್ದದ ಆರೋಪಣೆಯ ಕುರಿತಾಗಿ ಸಂಶಯಾತೀತವಾಗಿ ರುಜುವಾತು ಪಡಿಸುವಂತಹ ಸಾಕ್ಷ್ಯವನ್ನು ಹಾಜರುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿ ರುತ್ತದೆ ಎಂದು ತೀರ್ಮಾನಕ್ಕೆ ಬರಲಾಗುತ್ತದೆ.

32. ಈ ಮೇಲ್ಕಂಡ ಅಭಿಯೋಜನೆಯ ಪರ ಮೌಖಿಕ ಮತ್ತು ದಾಖಲಾತಿಯ ಸಾಕ್ಷ್ಯವನ್ನು ಕೂಲಂಕುಷವಾಗಿ ಪರೀಶೀಲಿಸಿದಾಗ, ದಿನಾಂಕ 23.12.2010 ರಂದು ರಾತ್ರಿ 03.30 ಗಂಟೆ ಸಮಯದಲ್ಲಿ, ಚಿತ್ರಹಳ್ಳಿ-ಶಿವಗಂಗ ಗ್ರಾಮಗಳ ಮಧ್ಯೆ, ಎನ್.ಹೆಚ್.13 ರಸ್ತೆಯಲ್ಲಿ, ಕೆ.ಎ.02-ಎನ್.2099 ರ ಓಮಿನಿ ವಾಹನವು ಕೆ.ಎ.16-ಎ.9243 ರ ಲಾರಿಯ ಹಿಂಭಾಗಕ್ಕೆ ಡಿಕ್ಕಿಹೊಡೆಸಿದ್ದರಿಂದ, ಸದರಿ ಓಮಿನಿ ವಾಹನದ ಮುಂಭಾಗ ಲಾರಿಯ ಕೆಳಗಡೆ ಸಿಕ್ಕಿಹಾಕಿಕೊಂಡು ನಜ್ಜುಗುಜ್ಜಾಗಿ, ಓಮಿನಿ ವಾಹನದ ಚಾಲಕನು ಸೇರಿದಂತೆ ಪ್ರಯಾಣಿಸುತ್ತಿದ್ದ ನಾಗರಾಜ, ಅತೀಕ್ ಉರ್ ರೇಹಮಾನ್, ಯೋಗೇಶ ಎಂಬ ನಾಲ್ಕು ಜನರು ಸ್ಥಳದಲ್ಲಿಯೇ ಮೃತಪಟ್ಟಿದ್ದು, ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಹಾಗೂ ಚಾಸಾ-24 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿ ರುವುದು ಕಂಡುಬರುತ್ತದೆ. ಆದಾಗ್ಯೂ ಸದರಿ ಅಪಘಾತಕ್ಕೆ 2 ನೇ ಆರೋಪಿತರ ನಿರ್ಲಕ್ಷ್ಯತೆಯ ಚಾಲನೆಯೇ ಕಾರಣವೆಂದು ಪರಿಶೀಲಿಸಲಾಗಿ, ಅಭಿಯೋಜನೆಯ ಪರ ಸಾಕ್ಷಿದಾರರಾದ ಫಿರ್ಯಾದುದಾರರು, ಗಾಯಾಳು ಸಾಕ್ಷಿದಾರರು, ಪ್ರತ್ಯಕ್ಷ ಸಾಕ್ಷಿದಾರರು ಮತ್ತು ಮಹಜರಿನ ಸಾಕ್ಷಿದಾರರು ಸೇರಿದಂತೆ ಬಹುತೇಕ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಉಳಿದಂತೆ ತನಿಖಾಧಿಕಾರಿಗಳು 2 ನೇ ಆರೋಪಿತನ ವಿರುದ್ದದ ಆರೋಪಣೆಯ ಕುರಿತಾಗಿ ಸಂಶಯಾತೀತವಾಗಿ ರುಜುವಾತುಪಡಿಸುವಂತಹ ಸಾಕ್ಷ್ಯವನ್ನು ಹಾಜರುಪಡಿಸುವಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ. ಹಾಗಾಗಿ ಸದರಿ ಅಪಘಾತವು 2 ನೇ ಆರೋಪಿತರ ನಿರ್ಲಕ್ಷ್ಯತೆಯ ಚಾಲನೆಯ ಕಾರಣದಿಂದ ಉಂಟಾಗಿರುತ್ತದೆ ಎಂಬುದರ ಕುರಿತು ನ್ಯಾಯಾಲಯಕ್ಕೆ ಸಂಶಯ ಉಂಟಾಗುತ್ತದೆ ಎಂದು ತೀರ್ಮಾನಕ್ಕೆ

ಬರಲಾಗುತ್ತದೆ. ಆದ್ದರಿಂದ 2 ನೇ ಆರೋಪಿತರು ಸದರಿ ಸಂಶಯದ ಲಾಭವನ್ನು ಪಡೆಯಲು ಅರ್ಹರಿರುತ್ತಾರೆ ಎಂದು ತೀರ್ಮಾನಕ್ಕೆ ಬಂದು ಅಂಶ-1 ರಿಂದ 4 ನ್ನು ನಕಾರಾತ್ಮಕ ಎಂದು ನಿರ್ಣಯಿಸಲಾಗಿದೆ.

**33. ಅಂಶ-5:** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಈ ಕೆಳಗಿನಂತೆ ಆದೇಶಿಸಿರುತ್ತೇನೆಃ-

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1)ರ ಅಡಿಯಲ್ಲಿ ಕಾರ್ಯೋನ್ಮುಖವಾಗಿ, 2 ನೇ ಆರೋಪಿತರ ವಿರುದ್ಧ ಹೊರಿಸಿದ ಭಾರತೀಯ ದಂಡ ಸಂಹಿತೆ ಕಲಂ 279, 337, 338, 304(ಎ) ರ ಅಡಿಯಲ್ಲಿನ ಆರೋಪಗಳಿಗಾಗಿ ನಿರಪರಾಧಿ ಎಂದು ನಿರ್ಣಯಿಸಲಾಗಿದೆ.

ಈ ಪ್ರಕರಣದಲ್ಲಿ 2 ನೇ ಆರೋಪಿತರ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ) ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು, ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 22 ನೇ ಏಪ್ರಿಲ್, 2026 ರಂದು ನಾನು ಉದ್ಘೋಷಿಸಿದ್ದೇನೆ.)

(ರಘುರಾಮ ಎನ್.ಎಸ್.)
ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.

## ಅನುಬಂಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ:**

| | | |
|---|---|---|
| ಪ್ರಾಸಾ-1 | : | ಆರ್. ಜಗಧೀಶ |
| ಪ್ರಾಸಾ-2 | : | ಅಸ್ಗರ್ ಅಲಿ |
| ಪ್ರಾಸಾ-3 | : | ಮಹೇಂದ್ರಪ್ಪ |
| ಪ್ರಾಸಾ-4 | : | ಗೌಸ್ ಸಾಹೇಬ್ |
| ಪ್ರಾಸಾ-5 | : | ಎಂ.ಎ. ನಟರಾಜ್ |
| ಪ್ರಾಸಾ-6 | : | ರಮೇಶ ಕುಮಾರ ಹೆಚ್.ಜಿ. |
| ಪ್ರಾಸಾ-7 | : | ಮಂಜಣ್ಣ ಟಿ. |

**ಅಭಿಯೋಜನೆ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು:**

| | | |
|---|---|---|
| ನಿಪಿ-1 | : | ಲಿಖಿತ ದೂರು |
| ನಿಪಿ-1(ಎ) | : | ಪ್ರಾಸಾ-1 ರವರ ಸಹಿ |
| ನಿಪಿ-1(ಬಿ) | : | ಪ್ರಾಸಾ-7 ರವರ ಸಹಿ |
| ನಿಪಿ-1(ಸಿ) | : | ಪ್ರಾಸಾ-7 ರವರ ಸಹಿ |
| ನಿಪಿ-2 | : | ಪ್ರಾಸಾ-3 ರವರ ಹೇಳಿಕೆ |
| ನಿಪಿ-3 | : | ಸ್ಥಳ ಪಂಚನಾಮೆ |
| ನಿಪಿ-3(ಎ) | : | ಪ್ರಾಸಾ-5 ರವರ ಸಹಿ |
| ನಿಪಿ-3(ಬಿ) | : | ಪ್ರಾಸಾ-6 ರವರ ಸಹಿ |
| ನಿಪಿ-4 | : | ಕಚ್ಚಾ ನಕಾಶೆ |
| ನಿಪಿ-4(ಎ) | : | ಪ್ರಾಸಾ-5 ರವರ ಸಹಿ |
| ನಿಪಿ-5 | : | ಶವ ತನಿಖಾ ವರದಿ |
| ನಿಪಿ-5(ಎ) | : | ಪ್ರಾಸಾ-5 ರವರ ಸಹಿ |
| ನಿಪಿ-6 ರಿಂದ 9 | : | ಶವ ಪರೀಕ್ಷೆ ವರದಿಗಳು |
| ನಿಪಿ-6(ಎ) ರಿಂದ 9(ಎ) | : | ಪ್ರಾಸಾ-5 ರವರ ಸಹಿಗಳು |
| ನಿಪಿ-10 | : | ಮೋಟಾರು ವಾಹನ ಅಪಘಾತ ವರದಿ |
| ನಿಪಿ-10(ಎ) | : | ಪ್ರಾಸಾ-5 ರವರ ಸಹಿ |
| ನಿಪಿ-11 ಮತ್ತು 12 | : | ಇಂಡಿಮಿನಿಟಿ ಬಾಂಡಗಳು |

| | | |
|---|---|---|
| ನಿಪಿ-11(ಎ) ಮತ್ತು 12(ಎ) | : | ಪ್ರಾಸಾ-5 ರವರ ಸಹಿಗಳು |
| ನಿಪಿ-13 ಮತ್ತು 14 | : | ಗಾಯದ ಪ್ರಮಾಣ ಪತ್ರಗಳು |
| ನಿಪಿ-13(ಎ) ಮತ್ತು 14(ಎ) | : | ಪ್ರಾಸಾ-5 ರವರ ಸಹಿಗಳು |
| ನಿಪಿ-15 ರಿಂದ 18 | : | ಶವ ಪಂಚನಾಮೆಗಳು |
| ನಿಪಿ-19 | : | ಪ್ರಥಮ ವರ್ತಮಾನ ವರದಿ |
| ನಿಪಿ-19(ಎ) | : | ಪ್ರಾಸಾ-7 ರವರ ಸಹಿ |

**ಆರೋಪಿತರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿ**:

- ಇಲ್ಲ -

**ಆರೋಪಿತರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳು**:

- ಇಲ್ಲ -

(ರಘುರಾಮ ಎನ್.ಎಸ್.)
ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.